ಸಂಪುಟ: 05 ಸಂಚಿಕೆ: 334 ಪುಟಗಳು: 08 ಸೋಮವಾರ 16 ಫೆಬ್ರವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ನಿಮ್ಮ ಬುದ್ಧಿ ಮತ್ತು ಹೃದಯಕ್ಕೆ ಸಂಘರ್ಷ ನಡೆಯುತ್ತಿರುವಾಗ ಹೃದಯದ ಮಾತನ್ನೇ ಕೇಳಿರಿ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

9448225696

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com

# ದೋಸ್ತಿ ನಾಯಕರ ನಡುವೆ ದಂಗಲ್ : ಜಿಬಿಎ ಎಲೆಕ್ಷನ್‌ಗೆ ಜೆಡಿಎಸ್ ಪ್ರತ್ಯೇಕ ಸ್ಪರ್ಧೆ

• **ಉದಯವಾಹಿನಿ, ಬೆಂಗಳೂರು**

ಸ್ಥಳೀಯ ಸಂಸ್ಥೆ ಚುನಾವಣೆ ಹೊತ್ತಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಯಲ್ಲಿ ಬಿರುಕು ಮೂಡಿದೆ. ಜಿಬಿಎ ಚುನಾವಣೆಯಲ್ಲಿ ಸೀಟು ಹಂಚಿಕೆ ಬಗ್ಗೆ ಸಮನ್ವಯದ ಕೊರತೆಯಿಂದ 85-100 ವಾರ್ಡ್‌ಗಳಲ್ಲಿ ಜೆಡಿಎಸ್ ಪ್ರತ್ಯೇಕವಾಗಿ ಸ್ಪರ್ಧಿಸಲು ಹೆಚ್ .ಡಿ. ಕುಮಾರಸ್ವಾಮಿ ಚಿಂತನೆ ನಡೆಸಿದ್ದಾರೆ. ಮತ್ತೊಂದೆಡೆ, 2028ರ ಸಿಎಂ ಸ್ಥಾನಕ್ಕೆ ಮೈತ್ರಿ ನಾಯಕರ ನಡುವೆ ಈಗಲೇ ಆಂತರಿಕ ಪೈಪೋಟಿ ತೀವ್ರಗೊಂಡಿದ್ದು, ಮೈತ್ರಿ ಭವಿಷ್ಯ ಕುರಿತು ಕುತೂಹಲ ಹೆಚ್ಚಿಸಿದೆ.

: ಸ್ಥಳೀಯ ಸಂಸ್ಥೆ ಚುನಾವಣೆಗೂ ಮುನ್ನ ಮೈತ್ರಿ ನಾಯಕರಲ್ಲಿ ಗೊಂದಲದ ನಡುವೆ ಜಿಬಿಎ ಎಲೆಕ್ಷನ್‌ಗೆ ಜೆಡಿಎಸ್ ತಯಾರಿ



**ಕುತೂಹಲ ಮೂಡಿಸಿದ ಹೆಚ್‌ಡಿಕೆ ನಡೆ**

ನಡೆಸಿದೆ. ಸೀಟು ಹಂಚಿಕೆಯಲ್ಲಿ ಸಮನ್ವಯತೆ ಮೂಡದಿದ್ರೂ, ಏನು ಮಾಡಬೇಕೆಂಬ ಬಗ್ಗೆ ಪ್ಲ್ಯಾನ್ ಎ ಮತ್ತು ಪ್ಲ್ಯಾನ್ ಬಿ ಸಿದ್ಧವಾಗಿದ್ದು, 85ರಿಂದ 100 ವಾರ್ಡ್‌ಗಳಲ್ಲಿ ಅಭ್ಯರ್ಥಿ ಕಣಕ್ಕಿಳಿಸಲು ಹೆಚ್ .ಡಿ. ಕುಮಾರಸ್ವಾಮಿ ತಯಾರಿ ನಡೆಸಿದ್ದಾರೆ. ಅದಕ್ಕೆ ಪೂರಕವಾಗಿ ಎರಡು ಸಭೆ ಮಾಡಿರುವ ಕೇಂದ್ರ ಸಚಿವ, ಸೀಟು ಹಂಚಿಕೆ ವೇಳೆ ಬಿಜೆಪಿ ಬಳಿ ಕನಿಷ್ಠ 70ರಿಂದ 80 ಸೀಟ್ ಕೇಳಲು ನಿರ್ಧರಿಸಿದ್ದಾರೆ. ಅಷ್ಟು ಕ್ಷೇತ್ರ ಬಿಟ್ಟುಕೊಟ್ಟರೆ ಮೈತ್ರಿಯಾಗಿ ಚುನಾವಣಾ ಹೋರಾಟ, ಇಲ್ಲದಿದ್ದರೆ ಪ್ರತ್ಯೇಕವಾಗಿ ಸ್ಪರ್ಧೆಗೆ ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ. 5 ಪಾಲಿಕೆಗಳ 369 ವಾರ್ಡ್‌ಗಳಲ್ಲಿ ಸಿದ್ಧತೆ ನಡೆಸಲು ಬೆಂಗಳೂರಿನ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರಿಗೆ ಹೆಚ್ ಡಿಕೆ ಕರೆ ನೀಡಿದ್ದು, ಮೈತ್ರಿ ನಾಯಕರ ಮುಂದಿನ ನಡೆ ಕುತೂಹಲ ಮೂಡಿಸಿದೆ.

ಮತ್ತೊಂದೆಡೆ ಕರ್ನಾಟಕದಲ್ಲಿ ಮುಂದಿನ ವಿಧಾನಸಭಾ ಚುನಾವಣೆಗೆ ಇನ್ನೂ ಎರಡುವರೆ ವರ್ಷಗಳು ಬಾಕಿ ಇರುವಾಗಲೇ, 2028ರ ಮುಖ್ಯಮಂತ್ರಿ ಹುದ್ದೆಗಾಗಿ ಮೈತ್ರಿ ಪಡೆಯಲ್ಲಿ ಪೈಪೋಟಿ ಶುರುವಾಗಿದೆ. ವಿಧಾನಸಭೆ ಚುನಾವಣಾ ಮೈತ್ರಿ ಬಗ್ಗೆಯೂ ಇನ್ನೂ ಯಾವುದೇ ನಿರ್ಧಾರವಾಗಿಲ್ಲದಿದ್ದರೂ, ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದಲ್ಲಿ 2028ರ ಸಿಎಂ ಪಟ್ಟಕ್ಕಾಗಿ ಹೋರಾಟ ಆರಂಭವಾಗಿದೆ. ಇತ್ತೀಚೆಗೆ ಹಾಸನದಲ್ಲಿ ಮಾತನಾಡಿದ್ದ ಪರಿಷತ್ ವಿಪಕ್ಷ ನಾಯಕ ಚಲವಾದಿ ನಾರಾಯಣಸ್ವಾಮಿ, ಯಾರಿಗೂ ಯಾರೂ ಅನಿವಾರ್ಯ ಅಲ್ಲ. 113 ಸೀಟು ಯಾರಿಗೆ ಬರುತ್ತೋ ಅವರ ಪಕ್ಷದವರೇ ಮುಖ್ಯಮಂತ್ರಿ. ಜೆಡಿಎಸ್‌ಗೆ ಬಂದರೆ ಹೆಚ್ .ಡಿಕೆ ಸಿಎಂ ಆಗಲು ಅಭ್ಯಂತರವಿಲ್ಲ ಎಂದಿದ್ದರು.

## ಬೆಳಗಾವಿಯಲ್ಲಿ 400 ಕೋಟಿ ರೂ ದರೋಡೆ ಕೇಸ್‌ಗೆ ಟ್ವಿಸ್ಟ್

• **ಉದಯವಾಹಿನಿ, ಬೆಳಗಾವಿ**

ಕರ್ನಾಟಕ, ಗೋವಾ, ಮಹಾರಾಷ್ಟ್ರದಲ್ಲಿ ನಡೆದಿದ್ದ 400 ಕೋಟಿ ರೂಪಾಯಿ ದರೋಡೆ ಪ್ರಕರಣ ಇಡೀ ದೇಶವನ್ನೇ ಬೆಚ್ಚಿಬೀಳಿಸಿತ್ತು. ದೇಶವನ್ನೇ ದಂಗಾಗಿಸಿದ ಈ ದರೋಡೆ ನಡೆದು ದಿನಗಳು ಉರುಳಿದರು ಈವರೆಗೆ ಕಂಟೇನರ್ ಗಳು ಹೋಗಿದ್ದೆಲ್ಲಿಗೆ ಕಂಟೇನರ್ ನಲ್ಲಿದ್ದ ಹಣ ಎಲ್ಲಿದೆ ಅನ್ನೋದು ರಿವೀಲ್ ಆಗಿಲ್ಲ. ಹೀಗಿರುವಾಗ ದೂರುದಾರ ಸಂದೀಪ್ ಪಾಟೀಲ್ ಬೆಳಗಾವಿ ಎಸ್ ಪಿ ಕೆ.ರಾಮರಾಜನ್‌ಗೆ ಪತ್ರ ಬರೆಯುವ ಮೂಲಕ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಬೆಳಗಾವಿ ಎಸ್ ಪಿ ಕೆ.ರಾಮರಾಜನ್ ಗೆ ಪತ್ರ ಬರೆದಿರುವ 400 ಕೋಟಿ ದರೋಡೆ ಪ್ರಕರಣದ ದೂರುದಾರ ಸಂದೀಪ್ ಪಾಟೀಲ್ , ಮಹಾರಾಷ್ಟ್ರ ಎಸ್‌ಐಟಿ ಪೊಲೀಸರಿಂದ ಪಾರದರ್ಶಕ ತನಿಖೆ ಆಗುತ್ತಿಲ್ಲ. ಘಟನೆ ಸಂಬಂಧ ಆಡಿಯೋ ದಾಖಲೆಗಳು ನನ್ನ ಬಳಿ ಇವೆ. ಅವುಗಳ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.

ಇನ್ನು ಪ್ರಕರಣ ಸಂಬಂಧ 8 ಆರೋಪಿಗಳನ್ನು ಮಹಾರಾಷ್ಟ್ರ ಎಸ್ ಐಟಿ ಬಂಧಿಸಿದೆ. ಆದರೆ ಮಹಾರಾಷ್ಟ್ರ ಪೊಲೀಸರ ತನಿಖೆ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಸಂದೀಪ್, ಈಗಾಗಲೇ ಎಸ್‌ಐಟಿ ಮತ್ತು ಪೊಲೀಸ್ ಮಹಾನಿರ್ದೇಶಕರ ವಿರುದ್ಧ ಮಹಾರಾಷ್ಟ್ರ ಪೊಲೀಸ್ ಮಹಾನಿರ್ದೇಶಕರ ವಿರುದ್ಧ ಹೈಕೋರ್ಟ್ ಗೆ ದೂರು ನೀಡಿದ್ದಾರೆ. ಆ ಮೂಲಕ ತನಿಖೆಯ ದಿಕ್ಕು ತಪ್ಪಿಸುವ ಪ್ರಯತ್ನ ನಡೆದಿರುವ ಬಗ್ಗೆ ಸಂದೀಪ್ ಶಂಕೆ ವ್ಯಕ್ತಪಡಿಸಿದ್ದಾರೆ.

## ವಿವಿಧ ಪೌಷ್ಟಿಕ ಯೋಜನೆಗಳನ್ನು ಜಾರಿಗೆ ತಂದರೂ ಇಳಿಕೆಯಾಗಿಲ್ಲ

• **ಉದಯವಾಹಿನಿ, ಬೆಂಗಳೂರು**

ಮಕ್ಕಳಲ್ಲಿ ಕಂಡು ಬರುವ ಅಪೌಷ್ಟಿಕತೆಯನ್ನು ಹೋಗಲಾಡಿಸಲು ರಾಜ್ಯ ಸರ್ಕಾರ ವಿವಿಧ ಪೌಷ್ಟಿಕಾಂಶ ಯೋಜನೆಗಳನ್ನು ಜಾರಿಗೆ ತಂದಿದೆ. ಆದರೂ ಕೂಡ 6 ವರ್ಷದೊಳಗಿನ ಮಕ್ಕಳಲ್ಲಿ ಅಪೌಷ್ಟಿಕತೆಯ ಸಮಸ್ಯೆ ಕಂಡು ಬಂದಿದೆ, ಸುಮಾರು 4.79 ಲಕ್ಷಕ್ಕೂ ಹೆಚ್ಚು ಮಕ್ಕಳು ತೀವ್ರವಾಗಿ ಬೆಳವಣಿಗೆಯಲ್ಲಿ ಕುಂಠಿತಗೊಂಡಿದ್ದಾರೆ. ಅಂಕಿಅಂಶಗಳ ಪ್ರಕಾರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪ್ರತಿನಿಧಿಸುವ ಬೆಳಗಾವಿ ಜಿಲ್ಲೆಯಲ್ಲೇ ಅತಿ ಹೆಚ್ಚು ಅಪೌಷ್ಟಿಕಾಂಶದಿಂದ ನರಳುತ್ತಿರುವ ಮಕ್ಕಳು ಕಂಡು ಬಂದಿದೆ. ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಈ ವಿಷಯ ಚರ್ಚೆಯಾಯಿತು. ಬಿಜೆಪಿ ಎಂಎಲ್‌ಸಿ ಹೇಮಲತಾ ನಾಯಕ್ ಅವರ ಪ್ರಶ್ನೆಗೆ ಲಕ್ಷ್ಮೀ ಹೆಬ್ಬಾಳ್ಕರ್ ಉತ್ತರಿಸಿದರು. ರಾಜ್ಯಾದ್ಯಂತ ಅಂಗನವಾಡಿ ಕೇಂದ್ರಗಳಲ್ಲಿ ನೋಂದಾಯಿಸಲಾದ 32,29,644 ಸಕ್ರಿಯ ಮಕ್ಕಳಲ್ಲಿ 32,17,112 ಮಕ್ಕಳ ಎತ್ತರ ಮತ್ತು ತೂಕದ ತಪಾಸಣೆ ನಡೆಸಲಾಗಿದೆ. 4. 79,931 ಮಕ್ಕಳಲ್ಲಿ ಬೆಳವಣಿಗೆ ಕುಂಠಿತಗೊಂಡಿರುವುದು ಕಂಡುಬಂದಿದೆ ಎಂದರು. ಬೆಳಗಾವಿಯಲ್ಲಿ 50,522 ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ನಂತರದ ಸ್ಥಾನ ವಿಜಯಪುರ 46,434, ಕಲಬುರಗಿ (43,919), ರಾಯಚೂರು (36,836), ಕೊಪ್ಪಳ (28,070) ಮತ್ತು ಯಾದಗಿರಿ (27,066) ನಂತರದ ಸ್ಥಾನದಲ್ಲಿದೆ. ಚಿಕ್ಕಮಗಳೂರಿನಲ್ಲಿ (1,337) ಕಡಿಮೆ ಕುಂಠಿತ ಮಕ್ಕಳಿದ್ದಾರೆ. ರಾಮನಗರದಲ್ಲಿ 2,264, ಹಾಸನ (3,173), ದಕ್ಷಿಣ ಕನ್ನಡ (3,248), ಕೊಡಗು (3,448) ಮತ್ತು ಉಡುಪಿ (4,304).

# ಭಾರತಕ್ಕೆ ಶಿವರಾತ್ರಿ ಪಾಕ್‌ಗೆ ಕರಾಳ ರಾತ್ರಿ

## ಪಾಕ್ ಕೊಲಂಬೊದಲ್ಲಿ ಆಡಿದರೂ ಅಷ್ಟೇ!

• **ಉದಯವಾಹಿನಿ, ಬೆಂಗಳೂರು**

ಕೊಲಂಬೊದ ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ನಿಗದಿತ 20 ಓವರ್ ಗಳಲ್ಲಿ 7 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿತು. ಇದಕ್ಕುತ್ತರವಾಗಿ ಪಾಕಿಸ್ತಾನ ತಂಡ 18 ಓವರ್ ಗಳಲ್ಲಿ 114 ರನ್ ಗಳಿಸುವಷ್ಟರಲ್ಲಿಯೇ ಆಲೌಟ್ ಆಯಿತು.



ನಿಧಾನಗತಿಯ ಪಿಚ್ ನಲ್ಲಿ ಸ್ಪರ್ಧಾತ್ಮಕ ಗುರಿ ಪಡೆದಿದ್ದ ಪಾಕಿಸ್ತಾನ ತಂಡ ಮೊದಲ ಓವರ್ ನಲ್ಲೇ ಅಪಾಯಕಾರಿ ಸಾಹಿಬ್ ಝಾದಾ ಫರ್ಹಾನ್ ಅವರ ವಿಕೆಟ್ ಅನ್ನು ಕಳೆದುಕೊಂಡಿತು. ಹಾರ್ದಿಕ್ ಪಾಂಡ್ಯ ಅವರು ಈ ವಿಕೆಟ್ ಎಗರಿಸಿದ್ದಲ್ಲದೆ ಮೊದಲನೇ ಓವರ್ ಮೇಡನ್ ಮಾಡುವ ಮೂಲಕ

| ಇಂಡೋ ಪಾಕ್ ಗರಿಷ್ಟ ಮೊತ್ತ | | |
|---|---|---|
| 175/7 | ಕೊಲಂಬೋ, ಭಾರತ | 2026 |
| 160/6 | ಮೆಲ್ಬರ್ನ್, ಭಾರತ | 2022 |
| 159/8 | ಮೆಲ್ಬರ್ನ್, ಪಾಕಿಸ್ತಾನ | 2022 |
| 157/5 | ಜೋಹಾನ್ಸ್‌ಬರ್ಗ್, ಭಾರತ | 2007 |
| 152/0 | ದುಬೈ, ಪಾಕಿಸ್ತಾನ | 2021 |

ಎದುರಾಳಿ ತಂಡದ ಮೇಲೆ ಒತ್ತಡ ಹೇರಿದರು. ಈ ಒತ್ತಡದಿಂದ ಹೊರಬರಲು ಪಾಕಿಸ್ತಾನ ತಂಡ ಒದ್ದಾಡಿತು. ಐದನೇ ಓವರ್‌ನಲ್ಲಿ 34 ರನ್ ಗಳಾಗುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡಿತು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತ ತಂಡ ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರನ್ನು ಮೊದಲ ಓವರ್ ನಲ್ಲೇ ಕಳೆದುಕೊಂಡಿತು. ಸ್ಪಿನ್ನರ್ ಸಲ್ಮಾನ್ ಅಲಿ ಆಘಾ ಅವರೆಸೆದ ಮೊದಲ ಓವರ್ ನ ಕೊನೇ ಎಸೆತದಲ್ಲಿ ಎಡವಿದ ಅವರು ಶಾಹಿನ್ ಶಾ ಅಫ್ರಿದಿ ಕೈಗ ಕ್ಯಾಚಿತ್ತು ಪೆವಿಲಿಯನ್ ಸೇರಿಕೊಂಡರು. ಆದರೆ ಪಾಕಿಸ್ತಾನಕ್ಕೆ ಆಘಾತ ನೀಡಿದ್ದು ಇಶಾನ್ ಕಿಶನ್. ಯಾವುದೇ ಒತ್ತಡವಿಲ್ಲದೆ ಪಾಕ್ ಬೌಲಿಂಗ್ ಬೆಂಡೆತ್ತಿದ ಅವರು, ಕೇವಲ 27 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಭಾರತ ಪವರ್ ಪ್ಲೇನ 6 ಓವರ್ ಗಳಲ್ಲಿ 52 ರನ್ ಪೇರಿಸಿತ್ತು.



**ಟೀಂ ಇಂಡಿಯಾ ವಿರುದ್ಧ 9ರಲ್ಲಿ 8ನೇ ಸೋಲು**

1 ಪಾಕ್ ಬೌಲರ್ಸ್‌ಗೆ ನಡುಕ ಹುಟ್ಟಿಸಿದ ಇಶಾನ್

2 ಪಾಕಿಸ್ತಾನ ಧೂಳೀಪಟ ಮಾಡಿದ ಟೀಮ್ ಇಂಡಿಯಾ!

3 ಪೈಪೋಟಿಯನ್ನೂ ನೀಡದೇ ಮುಗ್ಗರಿಸಿದ ಪಾಕ್

**ಪಾಕಿಸ್ತಾನದ ಹೆಡೆಮುಡಿ ಕಟ್ಟಿದ ಟೀಮ್ ಇಂಡಿಯಾ**

11.1 ಓವರ್ ಗಳಲ್ಲಿ 100 ರನ್ ಗಡಿ ತಲುಪಿತು.

ತಂಡದ ಮೊತ್ತ 88 ಆಗಿದ್ದಾಗ ಉತ್ತಮವಾಗಿ ಆಡುತ್ತಿದ್ದ ಇಶಾನ್ ಕಿಶನ್ ಅವರ ವಿಕೆಟ್ ಪತನವಾಯಿತು. ಔಟಾಗುವ ಮುನ್ನ ಅವರು, 40 ಎಸೆತಗಳಿಂದ 10 ಬೌಂಡರಿ ಮತ್ತು 3 ಸಿಕ್ಸರ್ ಗಳಿದ್ದ 77 ರನ್ ಗಳಿಸಿದ್ದರು. ಅವರ ವಿಕೆಟ್ ಪತನದ ಬಳಿಕ ತಿಲಕ್ ವರ್ಮಾ(24 ಎಸೆತದಲ್ಲಿ 25 ರನ್), ಸೂರ್ಯಕುಮಾರ್ ಯಾದವ್ (29 ಎಸೆತದಲ್ಲಿ 32 ರನ್) ಮತ್ತು ಶಿವಂ ದುಬೆ (17 ಎಸೆತದಲ್ಲಿ 27 ರನ್ ) ಬಾರಿಸಿದ್ದರಿಂದ ಗೌರವಯುತ ಮೊತ್ತ ಗಳಿಸುವಂತಾಯಿತು. ಪಾಕ್ ತಂಡದ ಪರ ಸಯೀಮ್ ಅಯೂಬ್ 3 ವಿಕೆಟ್ ಕಬಳಿಸಿದರು. ಆರಂಭಿಕ ಬೌಲಿಂಗ್ ಮಾಡಿದ ಸಲ್ಮಾನ್ ಆಘಾ ಅವರು 10 ರನ್ ಗೆ 1 ವಿಕೆಟ್ ಗಳಿಸಿದರು.

**ದಾಖಲೆ ಜಯ ಯಾಕೆ**

**ಈ ಪಂದ್ಯಕ್ಕೆ ಮೊದಲು 2022 ರಲ್ಲಿ ಪಾಕ್ ವಿರುದ್ಧ ಮೆಲ್ಬರ್ನ್‌ನಲ್ಲಿ ಭಾರತ 160 ರನ್ ಗಳಿಸಿದ್ದೇ ದೊಡ್ಡ ಮೊತ್ತವಾಗಿತ್ತು. ಈಗ 175 ರನ್ ಹೊಡೆಯುವ ಮೂಲಕ ಅತಿ ಹೆಚ್ಚು ರನ್ ಹೊಡದ ದಾಖಲೆ ಬರೆದಿದೆ.**

ಪಾಕಿಸ್ತಾನ ವಿರುದ್ಧದ ಟಿ20 ವಿಶ್ವಕಪ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ ಪರ ಆರಂಭಿಕ ಬ್ಯಾಟ್ಸ್‌ಮನ್ ಇಶಾನ್ ಕಿಶನ್ ಅದ್ಭುತ ಬ್ಯಾಟಿಂಗ್ ಪ್ರದರ್ಶಿಸಿದರು. ಕೇವಲ 27 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ ಕಿಶನ್, ತಂಡವನ್ನು ಆರಂಭಿಕ ಆಘಾತದಿಂದ ಹೊರತಂದರು. ವಾಸ್ತವವಾಗಿ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್ ನಲ್ಲಿ ಪಾಕಿಸ್ತಾನದ ವಿರುದ್ಧ ಇಶಾನ್ ಕಿಶನ್ ಇಂದು ಮೊದಲ ಪಂದ್ಯವನ್ನಾಡಿದರು. ಆಡಿದ ಮೊದಲ ಪಂದ್ಯದಲ್ಲೇ ಪಾಕ್ ಬೌಲರ್‌ಗಳ ಬೆವರಿಳಿಸಿದ ಕಿಶನ್ ಸ್ಫೋಟಕ ಅರ್ಧಶತಕ ಬಾರಿಸಿದರು. ಮಾತ್ರವಲ್ಲದೆ ಪಾಕಿಸ್ತಾನ ವಿರುದ್ಧದ ಪವರ್‌ಪ್ಲೇನಲ್ಲಿ 42 ರನ್ ಬಾರಿಸುವ ಮೂಲಕ ಪಾಕಿಸ್ತಾನ ವಿರುದ್ಧದ ಟಿ20ಪಂದ್ಯದ ಪವರ್‌ಪ್ಲೇನಲ್ಲಿಯೇ ಅತ್ಯಧಿಕ ರನ್ ಕಲೆಹಾಕಿದ ಭಾರತೀಯ ಬ್ಯಾಟ್ಸ್‌ಮನ್ ಎನಿಸಿಕೊಂಡರು. ಈ ಟೂರ್ನಿಯಲ್ಲಿ ಎರಡನೇ ಅರ್ಧಶತಕ ಬಾರಿಸಿದ ಇಶಾನ್ ಕಿಶನ್, ಈ ಪಂದ್ಯದಲ್ಲಿ 40 ಎಸೆತಗಳಲ್ಲಿ 10 ಬೌಂಡರಿ ಮತ್ತು 3 ಸಿಕ್ಸರ್‌ಗಳ ಸಹಿತ 192.50 ಸ್ಟ್ರೈಕ್ ರೇಟ್‌ನಲ್ಲಿ 77 ರನ್ ಕಲೆಹಾಕಿದರು. ಈ ಮೂಲಕ ಪಾಕಿಸ್ತಾನ ವಿರುದ್ಧ ಟಿ20 ವಿಶ್ವಕಪ್‌ನಲ್ಲಿ ಅರ್ಧಶತಕ ಬಾರಿಸಿದ ನಾಲ್ಕನೇ ಬ್ಯಾಟ್ಸ್‌ಮನ್ ಎನಿಸಿಕೊಂಡರು. ಕಿಶನ್ ಗೂ ಮೊದಲು ವಿರಾಟ್ ಕೊಹ್ಲಿ, ಯುವರಾಜ್ ಸಿಂಗ್ ಮತ್ತು ಗೌತಮ್ ಗಂಭೀರ್ ಈ ಸಾಧನೆ ಮಾಡಿದ್ದರು. ರಾಬಿನ್ ಉತ್ತಪ್ಪ 2007 ರ ಟಿ20 ವಿಶ್ವಕಪ್ ನಲ್ಲಿ ಮೊಟ್ಟ ಮೊದಲ ಬಾರಿಗೆ ಈ ಸಾಧನೆ ಮಾಡಿದ್ದರು. ಆ ನಂತರ ಗೌತಮ್ ಗಂಭೀರ್ ಕೂಡ 2007 ರ ಟಿ20 ವಿಶ್ವಕಪ್ ನಲ್ಲಿ ಪಾಕಿಸ್ತಾನದ ವಿರುದ್ಧ ಟಿ20 ಅರ್ಧಶತಕ ಸಿಡಿಸಿದ್ದರು. ಅದಾದ ಬಳಿಕ ವಿರಾಟ್ ಕೊಹ್ಲಿ 2012, 2016, 2021 ಮತ್ತು 2022 ರ ಟಿ20 ವಿಶ್ವಕಪ್ ಗಳಲ್ಲಿ ಪಾಕಿಸ್ತಾನ ವಿರುದ್ಧ ಅರ್ಧಶತಕ ಬಾರಿಸಿದ್ದರು. ಈಗ, ಇಶಾನ್ ಕಿಶನ್ ಈ ಸಾಧನೆ ಮಾಡಿದ್ದಾರೆ. ಇದು ಭಾರತ ಹಾಗೂ ಪಾಕಿಸ್ತಾನ ನಡುವಿನ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಇಶಾನ್ ಕಿಶನ್ ಗಳಿಸಿದ ಮೂರನೇ ವೇಗದ ಅರ್ಧಶತಕವಾಗಿದೆ. ಪಾಕಿಸ್ತಾನದ ಮೊಹಮ್ಮದ್ ಹಫೀಜ್ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. 2012 ರಲ್ಲಿ ಭಾರತದ ವಿರುದ್ಧ ಅವರು 23 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದ್ದರು. ಅದಾದ ನಂತರ, ಅಭಿಷೇಕ್ ಶರ್ಮಾ ಪಾಕಿಸ್ತಾನ ವಿರುದ್ಧ 24 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ್ದರೆ, ಈಗ ಇಶಾನ್ ಕಿಶನ್ 27 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದರು.

**ಚೊಚ್ಚಲ ಪಂದ್ಯದಲ್ಲೇ ದಾಖಲೆಯ ಅರ್ಧಶತಕ ಬಾರಿಸಿದ ಇಶಾನ್ ಕಿಶನ್**

# ಕಾಂಗ್ರೆಸ್ ಪಕ್ಷದ ಮನೆಯಲ್ಲಿ ನಿಲ್ಲದ ಬಣಗಳ ವಾರ್

## ಮಲ್ಲಿಕಾರ್ಜುನ ಖರ್ಗೆ ಮಾತಿಗೂ ಗಣಿಗ ರವಿ ರಾಮಯ್ಯ ಡೋಂಟ್ ಕೇರ್

• **ಉದಯವಾಹಿನಿ, ಬೆಂಗಳೂರು**

ನಾಯಕತ್ವ ವಿಚಾರವಾಗಿ ಬಹಿರಂಗ ಹೇಳಿಕೆಗಳನ್ನು ನೀಡದಂತೆ ಹೈಕಮಾಂಡ್ ಸೂಚನೆಯ ಬಳಿಕವೂ ರಾಜ್ಯ ಕಾಂಗ್ರೆಸ್‌ನಲ್ಲಿ ಬಣಗಳ ನಡುವಿನ ಸಂಘರ್ಷ ಮುಂದುವರಿದಿದೆ. ಸಿದ್ದರಾಮಯ್ಯ 5 ವರ್ಷ ಸಿಎಂ ಎಂದು ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್, ಯತೀಂದ್ರ ಸಿದ್ದರಾಮಯ್ಯ ಅವರೇ ನಮ್ಮ ಹೈಕಮಾಂಡ್ ಎಂದಿದ್ದಾರೆ. ನಮಗೆ ಹೈಕಮಾಂಡ್ ನೋಟಿಸ್ ಕೊಡಬಹುದು, ಆದ್ರೆ ಹೈಕಮಾಂಡ್ ಗೆ ನಾವು ನೋಟಿಸ್ ಕೊಡಲು ಸಾಧ್ಯವಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಯತೀಂದ್ರ ನಮ್ಮ ಹೈಕಮಾಂಡ್ ಅಂತಾ ಡಿಸಿಎಂ ಡಿ.ಕೆ. ಶಿವಕುಮಾರ್ ಅವರೇ ಹೇಳಿದ್ದಾರೆ. ಹೀಗಾಗಿ ನಾನೂ ಅದನ್ನೇ ಹೇಳುತ್ತೇನೆ, ಯತೀಂದ್ರ ನಮ್ಮ ಹೈಕಮಾಂಡ್ ಅನ್ನೋದನ್ನ ನೂರಕ್ಕೆ ನೂರರಷ್ಟು ಒಪ್ಪಿಕೊಳ್ತೇವೆ. ಯಾರೂ ಸ್ಟೇಟ್ ಮೆಂಟ್ ಕೊಡಬೇಡಿ ಅಂತ ನಾಲ್ಕು ಬಾರಿ ಹೇಳಿದ್ರು. ಆದ್ರೂ ಸ್ಟೇಟ್ ಮೆಂಟ್ ಕೊಡ್ತಿದ್ದಾರೆ ಅಂದ್ರೆ, ಅವರೇ ಸುಪ್ರೀಂ. ಖರ್ಗೆಗಿಂತ ಜಾಸ್ತಿನಾ, ಡಿಕೆಗಿಂತ ಕಡಿಮೆನಾ ಅಂತಾ ಹೇಳಲು ಆಗಲ್ಲ. ಬೇಡ ಅಂದ್ರೂ ಮಾತನಾಡುತ್ತಿದ್ದಾರೆ



ಅಂದ್ರೆ, ಪವರ್ ಫುಲ್ ಮ್ಯಾನ್ ಎಂದು ಹೇಳುವ ಮೂಲಕ ಪರೋಕ್ಷವಾಗಿ ಯತೀಂದ್ರ ವಿರುದ್ಧ ಗಣಿಗ ರವಿಕುಮಾರ್ ಆಕ್ರೋಶ ಹೊರಹಾಕಿದ್ದಾರೆ.

ಡಿ.ಕೆ.ಶಿವಕುಮಾರ್ ಸಿಎಂ ಆಗಲೇಬೇಕು ಎಂದಿರುವ ಅವರು, ಡಿಕೆಶಿ, ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದಿದ್ದಾರೆ. ಡಿ.ಕೆ.ಶಿವಕುಮಾರ್‌ಗೆ ರಾಜಕೀಯ ತಂತ್ರಗಾರಿಕೆ, ಚಾಣಾಕ್ಷತನ ಇದೆ. ಯಾವಾಗ ಯಾವ ಪಾನ್ ಮೂವ್ ಮಾಡಿದ್ರೆ ಗೇಮ್ ಗೆಲ್ಲಬಹುದೆಂದು ಗೊತ್ತಿದೆ. ಬುದ್ಧಿವಂತಿಕೆ ಇರುವುದಕ್ಕೆ ಸೈಲೆಂಟಾಗಿ ಕಾಯಿನ್ ಮೂವ್ ಮಾಡ್ತಿದ್ದಾರೆ. ರಾಜಕಾರಣ ಅಂದಮೇಲೆ ಆಟ ಇರಲೇಬೇಕು, ಆಟ ಬಿಡಲು ಆಗಲ್ಲ. ನಮ್ಮದು ಐರ್ಲೆಂಡ್ ಟೀಂ ಅಲ್ಲ, ಬಲಿಷ್ಠ ಭಾರತ ಟೀಂ. ಮುಖ್ಯಮಂತ್ರಿ ಆಗಬೇಕು ಎನ್ನುವ ಆಸೆ ಡಿ.ಕೆ. ಶಿವಕುಮಾರ್ ಗೆ ಇದ್ದು, ಪ್ರಶ್ನೆಗಳಿಗೆ ಅತೀ ಶೀಘ್ರದಲ್ಲೇ ಉತ್ತರ ಬರಲಿದೆ ಎಂದಿದ್ದಾರೆ.

ನಾಯಕತ್ವ ಗೊಂದಲದ ನಡುವೆ ಎಐಸಿಸಿ ಅಧ್ಯಕ್ಷ ಖರ್ಗೆ ನಾವೆಲ್ಲಾ ಜೊತೆಯಾಗಿ, ಒಗ್ಗಟ್ಟಾಗಿ ಹೋಗಬೇಕು ಎಂದು ಪಾಠ ಮಾಡಿದ್ದರು.

ಭೀಮಣ್ಣ ಖಂಡ್ರೆ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಅವರು, ಭೀಮಣ್ಣ ಖಂಡ್ರೆ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಹೋಗಿದ್ದರು. ಆದ್ರೆ ಪಕ್ಷ ಬಿಟ್ಟು ಹೋದ್ರು ಅವರ ತತ್ವ, ಸಿದ್ಧಾಂತ ಒಂದೇಯಾಗಿತ್ತು. ಹೀಗಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಇರಬೇಕು ಎಂದು ಬಸವಣ್ಣನ ವಚನ ಹೇಳುವ ಮೂಲಕ ಸಂದೇಶ ನೀಡಿದ್ದರು. ಆದ್ರೆ ಸದ್ಯ ರಾಜ್ಯ ಕಾಂಗ್ರೆಸ್ ನಾಯಕರು ಹೈಕಮಾಂಡ್ ಸೂಚನೆಯನ್ನೂ ಮೀರಿ ಮಾತಾಡುತ್ತಿರೋದು ಬಣ ಬಡಿದಾಟವನ್ನು ಇಮ್ಮಡಿಗೊಳಿಸಿದೆ. ವಿಪಕ್ಷಗಳಿಗೂ ಆಹಾರವಾಗ್ತಿದೆ.

# ಸರ್ಕಾರಿ ಗೌರವಕ್ಕೆ ತಗುಲಿದ ವೆಚ್ಚ ಪಾವತಿಸುವಂತೆ ದಿ ರಾಮಯ್ಯ ಕುಟುಂಬಕ್ಕೆ ಸರ್ಕಾರ ಬಿಲ್

## ● ವಾಹನಗಳ ಸಂಚಾರ ಗಣನೀಯ ಹೆಚ್ಚಳ ● ಕೆಲಸ ಆರಂಭಿಸಿದ ಕೇಂದ್ರ ಸರ್ಕಾರ; 4 ಜಿಲ್ಲೆಗೆ ಅನುಕೂಲ


• **ಉದಯವಾಹಿನಿ, ಬೆಂಗಳೂರು**

ರಾಜ್ಯ ಕಾಂಗ್ರೆಸ್ ಸರ್ಕಾರ ಒಂದು ಸಾವಿರ ದಿನ ಪೂರೈಸಿದ ಸಂಭ್ರಮದಲ್ಲಿದೆ. ಸರ್ಕಾರದ ಘಟಾನುಘಟಿಗಳು ಇಂದು ಹಾವೇರಿಯಲ್ಲಿ ಅಬ್ಬರಿಸಿದರು. ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶದ ಹೆಸರಿನಲ್ಲಿ ಒಂದು ಲಕ್ಷ ಕುಟುಂಬಗಳಿಗೆ ಹಕ್ಕು ಪತ್ರ ವಿತರಿಸಲಾಗಿದೆ. ಈ ಮಧ್ಯೆ ಇತ್ತೀಚೆಗೆ ನಿಧನರಾದ ಹಿರಿಯ ಪತ್ರಕರ್ತ ರಾಮಯ್ಯನವರ ಕುಟುಂಬಸ್ಥರಿಗೆ ಬಿಲ್ ನೀಡಿದೆ ಎನ್ನಲಾಗುತ್ತಿದ್ದು, ಸುದ್ದಿ ಹರಿದಾಡುತ್ತಿದೆ. ಇದು ನಿಜವೇ ಆದರೆ, ಕಾಂಗ್ರೆಸ್ ಸರ್ಕಾರದಂತಹ ಲಜ್ಜೆಗೇಡಿ ಸರ್ಕಾರ ಮತ್ತೊಂದಿಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ್ ವಾಗ್ದಾಳಿ ಮಾಡಿದ್ದಾರೆ.

**ಕಾಂಗ್ರೆಸ್ ವಿರುದ್ಧ ಬಿಜೆಪಿ ಕಿಡಿ**

**ದಿವಂಗತ ರಾಮಯ್ಯನವರ ಕುಟುಂಬಕ್ಕೆ ಬಿಲ್:** ಈ ಬಗ್ಗೆ ಟ್ವೀಟ್ ಮಾಡಿರುವ ಆರ್ . ಅಶೋಕ್, ಇತ್ತೀಚೆಗೆ ನಿಧನರಾದ ಹಿರಿಯ ಪತ್ರಕರ್ತರು, ವಿಧಾನ ಪರಿಷತ್ ಮಾಜಿ ಸದಸ್ಯರಾದ ಶ್ರೀ ರಾಮಯ್ಯನವರ ಅಂತ್ಯಸಂಸ್ಕಾರವನ್ನ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸುವುದಾಗಿ ಘೋಷಣೆ ಮಾಡಿದ್ದ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ, ಸರ್ಕಾರಿ ಗೌರವಕ್ಕೆ ತಗುಲಿದ ಖರ್ಚು ವೆಚ್ಚ ಪಾವತಿಸುವಂತೆ ದಿವಂಗತ ರಾಮಯ್ಯನವರ ಕುಟುಂಬಕ್ಕೆ ಬಿಲ್ ಕಳುಹಿಸಿರುವ ಘಟನೆ ನಾಡಿನ ಹಿರಿಯ ಪತ್ರಕರ್ತರಿಗೆ ಮಾಡಿರುವ ಅಪಮಾನದ ಜೊತೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಯಾವ ಮಟ್ಟಕ್ಕೆ ದಿವಾಳಿ ಆಗಿದೆ, ಎಷ್ಟು ಲಜ್ಜೆಗೆಟ್ಟ ಸ್ಥಿತಿಗೆ ತಲುಪಿದೆ ಎನ್ನುವುದಕ್ಕೆ ಮತ್ತೊಂದು ತಾಜಾ ಉದಾಹರಣೆಯಾಗಿದೆ ಎಂದು ಕಿಡಿಕಾರಿದ್ದಾರೆ.

**ಆರ್. ಅಶೋಕ್ ಟ್ವೀಟ್**



ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರೇ, ಶ್ರೀ ರಾಮಯ್ಯನವರ ಅಂತ್ಯಸಂಸ್ಕಾರದ ವೇಳೆ ಗಣ್ಯ ವ್ಯಕ್ತಿಗಳ ಭೇಟಿಗೆ ನಡೆಸಿದ ಸಿದ್ಧತೆಗಳು, ಬ್ಯಾರಿಕೇಡ್ ಅಳವಡಿಕೆ, ಭದ್ರತಾ ವ್ಯವಸ್ಥೆ ಮತ್ತು ಇತರ ಲಾಜಿಸ್ಟಿಕ್ ಸಿದ್ಧತೆಗಳಿಗೆ ಹಣ ಪಾವತಿಸುವಂತೆ ನಿಮ್ಮ ಪೊಲೀಸ್ ಇಲಾಖೆ ಓರ್ವ ವ್ಯಾಪಾರಿಯ ಮೂಲಕ ರಾಮಯ್ಯನವರ ಕುಟುಂಬಸ್ಥರಿಗೆ ಬಿಲ್ ನೀಡಿದೆ ಎಂಬ ಸುದ್ದಿ ಹರಿದಾಡುತ್ತಿದೆ. ಇದು ನಿಜವೇ ಆದರೆ, ನಿಮ್ಮ ಕಾಂಗ್ರೆಸ್ ಸರ್ಕಾರದಂತಹ ಲಜ್ಜೆಗೇಡಿ ಸರ್ಕಾರ ಮತ್ತೊಂದಿಲ್ಲ ಎಂದಿದ್ದಾರೆ.

**ಸಾವಿನಲ್ಲೂ ಕಾಸು ಕೇಳುವ ನೀಚತನಕ್ಕೆ ಇಳಿದಿದೆ:** ಬಿಜೆಪಿ ಕೂಡ ಟ್ವೀಟ್ ಮಾಡಿದ್ದು, ಸಾವಿರ ದಿನದ ಕಾಂಗ್ರೆಸ್ ಸರ್ಕಾರ ಸಾವಿನಲ್ಲೂ ಕಾಸು ಕೇಳುವ ನೀಚತನಕ್ಕೆ ಇಳಿದಿದೆ. ಹಿರಿಯ ಪತ್ರಕರ್ತ, ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ರಾಮಯ್ಯನವರ ಅಂತ್ಯಸಂಸ್ಕಾರವನ್ನು ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿಸುವುದಾಗಿ ಬರುಡೆ ಬಿಟ್ಟ ಸಿಎಂ ಸಿದ್ದರಾಮಯ್ಯ ಸರ್ಕಾರ ಇದೀಗ ಹಿಂಬಾಗಿಲಿನಿಂದ ಅವರ ಕುಟುಂಬಸ್ಥರಿಗೆ ಬ್ಯಾರಿಕೇಡ್ ಹಾಕಿ ಬಂದೋಬಸ್ತ್ ಮಾಡಿರುವುದಕ್ಕೆ ಪೊಲೀಸ್ ಇಲಾಖೆ ಬಿಲ್ ಕಳುಹಿಸಿದೆ. ಮಿಸ್ಟರ್ ಗೊತ್ತಿಲ್ಲ ಹೋಮ್ ಮಿನಿಸ್ಟರ್ ಡಾ. ಜಿ ಪರಮೇಶ್ವರ್ ಅವರೇ, ಇದು ನಿಮಗೆ ಗೊತ್ತಿಲ್ಲವೇ ಅಥವಾ ನಿಮ್ಮ ಸರ್ಕಾರ ಸಾವಿರದ ದಿನಕ್ಕೆ ಇಷ್ಟೊಂದು ಪಾಪರ್ ಆಗಿದೆಯೇ ಎಂದು ಕಿಡಿಕಾರಿದೆ.

**ಈ ದಿನದ ದರ** | ಪೆಟ್ರೋಲ್: 102.92 ₹/L | ಡೀಸೆಲ್ : 90.99 ₹/L | ಬಂಗಾರ: ₹15,775/Gram24ct ₹14,460/Gram22ct | ಬೆಳ್ಳಿ: ₹275.00/Gram

## ಶಂಕರನನ್ನು ನೆನೆದು ಪುನೀತರಾಗೋಣ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕೆ.ಆರ್.ಪುರ

ಶಿವರಾತ್ರಿಯ ದಿನ ಭಕ್ತಾದಿಗಳು ಶಂಭೋ ಶಂಕರನನ್ನು ನೆನೆದು ಪುನೀತರಾಗೋಣ ಎಂದು ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ತಿಳಿಸಿದರು. ಮಹದೇವಪುರ ಕ್ಷೇತ್ರದ ಯಮಲೂರು ಗ್ರಾಮದ ಪುರಾತನ ದೇವಾಲಯದ ಶ್ರೀಸೋಮೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು.


ಎಲ್ಲಾ ಆಡಂಬರಗಳಿಂದ ಮುಕ್ತರಾಗಿ ಸರಳ ಮನಸ್ಸಿನಿಂದ ಪರಶಿವನನ್ನು ನೆನದು, ಭಜಿಸಿ ಶಿವರಾತ್ರಿಯನ್ನು ಆಚರಿಸೋಣ. ಸರಳತೆ, ಪ್ರಾಮಾಣಿಕತೆ, ಸತ್ಯ ಮತ್ತು ಶಕ್ತಿಯ ದೇವತೆ ಈಶ್ವರ ಲೋಕದಲ್ಲಿರುವ ಸಕಲ ಸಂಕಷ್ಟಗಳಿಗೆ ಪರಿಹಾರ ನೀಡಲಿ ಎಂದು ಪ್ರಾರ್ಥಿಸಿದರು. ಸ್ಥಳೀಯ ಬಿಜೆಪಿ ಮುಖಂಡರಾದ ಸಿ.ಜೆ ಲೋಕೇಶ್, ಯೋಗನಂದ ಬಾಬು, ಉಷಾ, ರಮೇಶ್, ವೆಂಕಟಪ್ಪ, ಸುದರ್ಶನ್, ಹಿತೇಂದ್ರ ಕುಮಾರ್, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಕೇಂದ್ರದಿಂದ ಬಿಡುಗಡೆಯಾದ ಅನುದಾನದ ದುರುಪಯೋಗ ಆಗಿದೆ: ಬಿ.ವೈ. ವಿಜಯೇಂದ್ರ ಆರೋಪ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಕೇಂದ್ರದಿಂದ ಬಂದ ವಿಶೇಷ ಸಹಾಯಧನದ ಬಳಕೆಯ ವಿಚಾರ ಈಗ ಮತ್ತೆ ರಾಜಕೀಯ ಚರ್ಚೆಗೆ ಕಾರಣವಾಗಿದೆ.

ಈ ಕುರಿತು ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, 2025-26 ಸಾಲಿನ ಮೂಲಧನ ಹೂಡಿಕೆಗೆ ನೀಡಲಾಗಿದ್ದ 1,323.96 ಕೋಟಿ ರೂಪಾಯಿಗಳನ್ನು ನಿಗದಿತ ಯೋಜನೆಗಳಿಗೆ ಬಳಸದೇ ಇತರೆ ಕಾರ್ಯಗಳಿಗೆ ತಿರುಗಿಸಲಾಗಿದೆ ಎಂದು ಆರೋಪಿಸಿದದ್ದಾರೆ. ಸಣ್ಣ ನೀರಾವರಿ ಯೋಜನೆಗಳಿಗೆ ಈ ಹಣ ತಲುಪಿಲ್ಲ ಎಂದು ಆರೋಪಿಸಿದ ಅವರು, ಹಣಕಾಸು ಇಲಾಖೆ ಮೊತ್ತವನ್ನು ತಡೆದು ಮುಂದಿನ ಹಂತದ ಅನುದಾನ ಪಡೆಯಲು ಕೃತಕ ಬಳಕೆ ಪ್ರಮಾಣಪತ್ರ ನೀಡುವಂತೆ ಒತ್ತಡ ಹೇರಲಾಗಿದೆ ಎಂದು ಹೇಳಿದರು. ಈ ಬಗ್ಗೆ ಮುಖ್ಯಮಂತ್ರಿಗಳು ಸ್ಪಷ್ಟನೆ ನೀಡಬೇಕು ಎಂದು



ಒತ್ತಾಯಿಸಿದರು. ಇನ್ನೂ ವಾಲ್ಮೀಕಿ ನಿಗಮ ಪ್ರಕರಣವನ್ನು ಉಲ್ಲೇಖಿಸಿ, ಕೋಟ್ಯಾಂತರ ರೂಪಾಯಿಗಳ ವರ್ಗಾವಣೆ ಮುಖ್ಯಮಂತ್ರಿಗಳ ಗಮನವಿಲ್ಲದೆ ಸಾಧ್ಯವಿಲ್ಲ ಎಂದು ಹೇಳಿದರು. ಗೃಹಲಕ್ಷ್ಮಿ ಯೋಜನೆಗೆ ಮೀಸಲಾದ 5,000 ಕೋಟಿ ರೂಪಾಯಿಗಳ ಸ್ಥಿತಿಗತಿಯನ್ನು ತಿಳಿಸಬೇಕೆಂದು ಕೂಡ ಒತ್ತಾಯಿಸಿದರು. ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಅನುದಾನ ಕಡಿತಗೊಂಡಿದೆ ಎಂದು ಆರೋಪಿಸಿ, ಮುಂದಿನ ಬಜೆಟ್‌ನಲ್ಲಿ 1,000 ಕೋಟಿ ರೂ. ಮೀಸಲಿಡಬೇಕು ಎಂದರು.

## 2048 ಬಂದ್ರೂ ಡಿಕೆಶಿ ಸಿಎಂ ಆಗಲ್ಲ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ಸಿಎಂ ಸ್ಥಾನ ಕುರಿತ ಚರ್ಚೆ ತೀವ್ರವಾಗುತ್ತಿರುವ ನಡುವೆ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಚಲವಾದಿ ನಾರಾಯಣಸ್ವಾಮಿ ಅವರು ಕಾಂಗ್ರೆಸ್ ಹಾಗೂ ಹೈಕಮಾಂಡ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಉಪ್ಪಿನಂಗಡಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾನು ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡಲ್ಲ ಎಂದು ಹೇಳುತ್ತಿದ್ದಾರೆ. ಮತ್ತೊಂದೆಡೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಯಾವುದೇ ಕಾರಣಕ್ಕೂ ಸಿಎಂ ಆಗದೇ ಬಿಡೋದಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಟೀಕಿಸಿದರು.

ಕಾಂಗ್ರೆಸ್ ಹೈಕಮಾಂಡ್ ಬಗ್ಗೆ ತೀವ್ರ ವಾಗ್ದಾಳಿ ನಡೆಸುತ್ತಾ, ಕಾಂಗ್ರೆಸ್ ಹೈಕಮಾಂಡ್ ಜೀವವಿಲ್ಲದಂತಾಗಿದೆ. ಎಐಸಿಸಿ ಸತ್ತಂತೆ ಬದುಕುತ್ತಿದೆ. ಬಹುಶಃ ಹೈಕಮಾಂಡ್ ಐಸಿಯುನಲ್ಲಿದೆ.



ಸಿಎಂ ಸ್ಥಾನ ವಿಚಾರದಲ್ಲಿ ಸ್ಪಷ್ಟ ಉತ್ತರ ನೀಡಲು ಸಾಧ್ಯವಾಗುತ್ತಿಲ್ಲ ಎಂದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಧಿಕಾರ ಇದೆಯೇ? ಹೈಕಮಾಂಡ್ ಎಂದರೆ ಯಾರು? ಅಧ್ಯಕ್ಷರೇ ಅಲ್ಲವೇ? ಎಂದು ಪ್ರಶ್ನಿಸಿದರು.

ಎರಡೂವರೆ ವರ್ಷದ ಸಿಎಂ ಅಗ್ರಿಮೆಂಟ್ ವಿಚಾರವನ್ನು ಉಲ್ಲೇಖಿಸಿ, ಅದು ಲಿಖಿತವೋ, ಅಲಿಖಿತವೋ? ಯಾರು ಯಾರಿಗೆ ಹೇಳಿದರು.

ಬಹಿರಂಗಪಡಿಸಲಿ ಎಂದು ಸವಾಲು ಹಾಕಿದರು. ಮುಂದುವರೆದು ಮಾತನಾಡಿದ ಅವರು, 2028ರಲ್ಲಿ ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಾರೆ ಎಂದು ಹೇಳುತ್ತಾರೆ. ಆದರೆ, 2048 ಆದರೂ ಅವರು ಸಿಎಂ ಆಗಲ್ಲ.

## ಕುಮಾರಿ ವೈನವಿರವರಿಗೆ ಗೀತಾವಾಚಸ್ಪತಿ ಬಿರುದು ನೀಡಿ ಆಶೀರ್ವಾದಿಸಿದ ನಿಶ್ಚಲಾನಂದನಾಥ ಶ್ರೀಗಳು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಆಶ್ರಯದಲ್ಲಿ ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ಪರಮಪೂಜ್ಯ, ಭೈರವೈಕ್ಯ ಶ್ರೀ ಕುಮಾರ ಚಂದ್ರಶೇಖರನಾಥ ಅಭಿನಂದನಾ ಗ್ರಂಥ ಲೋಕಾರ್ಪಣ ಹಾಗೂ ವಿವಿಧ ಕಾರ್ಯಕ್ರಮಗಳ ಸಮಾರಂಭದಲ್ಲಿ ನೆಲಮಂಗಲ ತಾಲ್ಲೂಕಿನ ತಡಸಿಘಟ್ಟದ ಕುಮಾರಿ ವೈನವಿ ಬಿ ಸಿ ಶ್ರೀಮದ್ ಭಗವದ್ಗೀತಾ ಕಂಠಪಾಠ ಹಾಗೂ ವಿಷ್ಣು ಸಹಸ್ರನಾಮ, ಲಲಿತ ಸಹಸ್ರನಾಮ, ವೆಂಕಟೇಶ್ವರ ಸುಪ್ರಭಾತ, ಅಷ್ಟಕಗಳು, ಶ್ಲೋಕಗಳು, ಸ್ತೋತ್ರಗಳು, ವಚನಗಳು ಜಾನಪದ ಗೀತೆಗಳು ಕೆಂಪೇಗೌಡ ಶತ ನಾಮಾವಳಿ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಬಹುಮುಖ ಸಾಧನೆಯನ್ನು ಗುರುತಿಸಿ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ. ನಿಶ್ಚಲಾನಂದನಾಥ ಮಹಾಸ್ವಾಮಿಗಳು ಗೀತಾವಾಚಸ್ಪತಿ ಎಂಬ ಬಿರುದನ್ನು ನೀಡಿ ಆಶೀರ್ವದಿಸಿ ಶುಭಕೋರಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದ ಡಾ. ನಿಶ್ಚಲಾನಂದನಾಥ ಮಹಾ ಸ್ವಾಮೀಜಿಗಳು ಪ್ರತಿ ಮಕ್ಕಳಲ್ಲೂ ಒಂದೊಂದು ಪ್ರತಿಭೆ ಇದ್ದೇ ಇರುತ್ತದೆ, ಪೋಷಕರು ಅದನ್ನು ಗುರುತಿಸಿ ಹೊರ ತೆಗೆಯುವ ಕೆಲಸ ಮಾಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಡಾ. ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ( ಚಂದ್ರವನ ಆಶ್ರಮ ಶ್ರೀರಂಗಪಟ್ಟಣ) ಶ್ರೀ ಗುರುಮೂರ್ತಿ ಗುರೂಜಿಯವರು ( ಶ್ರೀ ಸಾಯಿ ಸಂಸ್ಥಾನ ಮಠ ಹಿರೀಸಾವೆ), ಶ್ರೀ ರಾಮಕೃಷ್ಣಪ್ಪ ರವರು ( ಶ್ರೀಮಠದ ಟ್ರಸ್ಟಿಗಳು ) ಶ್ರೀ ನಂಜುಂಡಯ್ಯನವರು ( ನಿವೃತ್ತ ಪ್ರಾಚಾರ್ಯರು ) ಶ್ರೀಮಠದ ಭಕ್ತರು ಗಣ್ಯರು ಉಪಸ್ಥಿತರಿದ್ದರು.

## ಬೆಂಗಳೂರು ಅಪಾರ್ಟ್‌ಮೆಂಟ್‌ನಲ್ಲಿ ಇವಿ ಚಾರ್ಜರ್ ಅಳವಡಿಕೆ ವ್ಯಾಜ್ಯ ಸುಖಾಂತ್ಯ

# ಹೈಕೋರ್ಟ್ ಮಹತ್ವದ ಆದೇಶ



1 ಅಪಾರ್ಟ್‌ಮೆಂಟ್‌ನಲ್ಲಿ ಎಲೆಕ್ಟ್ರಿಕ್ ವಾಹನದ ಚಾರ್ಜರ್ ಅಳವಡಿಕೆ ಸಂಬಂಧ ತಕರಾರು.

2 ದೊಡ್ಡಬಳ್ಳಾಪುರ ರಸ್ತೆಯ ಶ್ರೀ ರಾಮ್ ಸುಹಾನಾ ಅಪಾರ್ಟ್‌ಮೆಂಟ್ ವ್ಯಾಜ್ಯ ಸುಖಾಂತ್ಯ.

3 ತಮ್ಮ ಪಾರ್ಕಿಂಗ್ ಸ್ಲಾಟ್‌ನಲ್ಲೇ ಇವಿ ಚಾರ್ಜರ್ ಅಳವಡಿಕೆಗೆ ಅಪಾರ್ಟ್‌ಮೆಂಟ್ ವಾಸಿಗೆ ಹೈಕೋರ್ಟ್ ಅನುವು.

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆ ಹೆಚ್ಚಾಗುತ್ತಿರುವಂತೆಯೇ ಅವುಗಳಿಗೆ ಅತ್ಯಗತ್ಯವಾಗಿರುವ ಚಾರ್ಜರ್‌ಗಳ ಅಳವಡಿಕೆ ಸಂಬಂಧ ಅಪಾರ್ಟ್‌ಮೆಂಟ್‌ಗಳಲ್ಲಿ ವ್ಯಾಜ್ಯಗಳೂ ದಿನೇದಿನೇ ಜಾಸ್ತಿಯಾಗುತ್ತಿವೆ. ಅಂತಹ ಕೆಲವೊಂದು ವ್ಯಾಜ್ಯಗಳು ಸೌಹಾರ್ದಯುತವಾಗಿ ಬಗೆಹರಿದರೆ ಇನ್ನೂ ಕೆಲ ಪ್ರಕರಣಗಳು ಬೆಸ್ಕಾಂ ಮತ್ತು ನ್ಯಾಯಾಲಯಗಳ ಮೆಟ್ಟಿಲೇರುತ್ತಿವೆ. ಇಂತದ್ದೇ ಪ್ರಕರಣವೊಂದು ಹೈಕೋರ್ಟ್ ಮೆಟ್ಟಿಲೇರಿ ಮೂರು ವರ್ಷಗಳಿಂದ ಅರ್ಜಿ, ಮೇಲ್ಮನವಿ ಹಾಗೂ ನ್ಯಾಯಾಂಗ ನಿಂದನೆ ರೂಪ ಪಡೆದು ಕೊನೆಗೆ ಇದೀಗ ಸುಖಾಂತ್ಯ ಕಂಡಿದೆ. ಎಲೆಕ್ಟ್ರಿಕ್ ವಾಹನಗಳಿಗಾಗಿ ಬೆಂಗಳೂರಿನಲ್ಲಿ ಚಾರ್ಜಿಂಗ್ ಸ್ಟೇಷನ್ ಅಳವಡಿಕೆ ಬಗ್ಗೆ ಬೆಸ್ಕಾಂ ನಿರ್ಧಾರ ಕೈಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು. ಅಪಾರ್ಟ್‌ಮೆಂಟ್‌ನಲ್ಲಿ ಇವಿ ಚಾರ್ಜರ್ ಅಳವಡಿಕೆ ಸಂಬಂಧ ದೊಡ್ಡಬಳ್ಳಾಪುರ ರಸ್ತೆಯ ಶ್ರೀರಾಮ್ ಸುಹಾನಾ ರೆಸಿಡೆನ್ಶಿಯಲ್ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ನ ಅಸೋಸಿಯೇಷನ್ ಮತ್ತು ಫ್ಲ್ಯಾಟ್ ಮಾಲೀಕ ನಾಗೇಂದ್ರ ಎಂಬುವವರ ಮಧ್ಯೆ 2023ರಿಂದ ನಡೆಯುತ್ತಿದ್ದ ವ್ಯಾಜ್ಯಕ್ಕೆ ಸಿಜೆ ವಿಭು ಬಖ್ರು ಮತ್ತು ನ್ಯಾ. ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯ ಪೀಠ ಅಂತ್ಯ ಹಾಡಿದೆ.

ಏಕಸದಸ್ಯ ಪೀಠ ಹಾಗೂ ವಿಭಾಗೀಯ ಪೀಠದ ಮುಂದೆ ಕಾನೂನು ಹೋರಾಟಗಳು ನಡೆದ ಬಳಿಕ ಕೊನೆಗೆ ಸಂಘ ಹಾಗೂ ಫ್ಲ್ಯಾಟ್ ಮಾಲೀಕರ ನಡುವೆ ಒಪ್ಪಂದ ಏರ್ಪಟ್ಟು ಫ್ಲ್ಯಾಟ್ ಮಾಲೀಕರು ತಮ್ಮ ಪಾರ್ಕಿಂಗ್ ಸ್ಲಾಟ್‌ನಲ್ಲಿಯೇ ಇವಿ ಚಾರ್ಜರ್ ಅಳವಡಿಕೆಗೆ ಅವಕಾಶ ಪಡೆದುಕೊಂಡಿದ್ದಾರೆ.

ಹಾಗಾಗಿ ನ್ಯಾಯಾಲಯ ಮೇಲ್ಮನವಿ, ನ್ಯಾಯಾಂಗ ನಿಂದನೆ ಅರ್ಜಿಗಳನ್ನು ವಿಲೇ ಮಾಡಿದೆ. ಪ್ರಕರಣದ ಎಲ್ಲಾ ಅಂಶಗಳನ್ನು ಅವಲೋಕಿಸಿದ ನ್ಯಾಯಾಲಯ, ಅರ್ಜಿದಾರರಿಗೆ ಹಂಚಿಕೆಯಾಗಿರುವ ಪಾರ್ಕಿಂಗ್ ಜಾಗ, ಅವರು ವಾಸಿಸುವ ಟವರ್‌ನಲ್ಲಿಯೇ ಇದೆ. ಹಾಗಾಗಿ ಅವರು ಬೆಸ್ಕಾಂ ನಿಯಮಗಳಂತೆ ವಿದ್ಯುತ್ ಚಾರ್ಜಿಂಗ್ ಪಾಯಿಂಟ್ ಅಳವಡಿಸಿಕೊಳ್ಳಬೇಕು. ಆದರೆ ಇದರಿಂದ ಅಪಾರ್ಟ್‌ಮೆಂಟ್‌ನ ಇತರೆ ಮಾಲೀಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಆದೇಶಿಸಿದೆ.

### ಪ್ರಕರಣದ ಹಿನ್ನೆಲೆ

**ದೊಡ್ಡಬಳ್ಳಾಪುರ ರಸ್ತೆಯ ಶ್ರೀರಾಮ್ ಸುಹಾನಾ ರೆಸಿಡೆನ್ಶಿಯಲ್ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ನ ನವೀನ್ ನಾಗೇಂದ್ರ, ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗೆ ತಮ್ಮ ಪಾರ್ಕಿಂಗ್ ಜಾಗದಲ್ಲಿ ಎಲೆಕ್ಟ್ರಿಕ್ ವಾಹನಕ್ಕಾಗಿ ಚಾರ್ಜಿಂಗ್ ಪಾಯಿಂಟ್ ಅಳವಡಿಕೆಗೆ ಅನುಮತಿ ಕೋರಿದ್ದರು. ಎಲೆಕ್ಟ್ರಿಕ್ ವಾಹನಗಳಿಗಾಗಿ ಮೆಸ್ಕಾಂ ವ್ಯಾಪ್ತಿಯಲ್ಲೂ ಚಾರ್ಜಿಂಗ್ ಪಾಯಿಂಟ್ ಅಳವಡಿಕೆ ಬಗ್ಗೆ ಮಹತ್ವದ ಆದೇಶ ಹೊರಬಿದ್ದಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.**

**ವಸತಿ ಸಂಕೀರ್ಣದಲ್ಲಿ 10 ಟವರ್‌ಗಳಿವೆ. ಅಪಾರ್ಟಮೆಂಟ್‌ನ ಎಲ್ಲಾ ಮಾಲೀಕರು ತಾವು ವಾಸ ಮಾಡುವ ಟವರ್‌ಗಳಲ್ಲಿಯೇ ಪಾರ್ಕಿಂಗ್ ಸ್ಲಾಟ್‌ಗಳನ್ನು ಹೊಂದಿಲ್ಲ.**

**ಕೆಲ ಮಾಲೀಕರಿಗೆ ಬೇರೆ ಬೇರೆ ಟವರ್‌ಗಳಲ್ಲಿ ಪಾರ್ಕಿಂಗ್ ಜಾಗ ಹಂಚಿಕೆ ಮಾಡಲಾಗಿದೆ. ಆದ್ದರಿಂದ ಎಲೆಕ್ಟ್ರಿಕ್ ಚಾರ್ಜಿಂಗ್ ಪಾಯಿಂಟ್‌ಗೆ ಅವಕಾಶ ನೀಡಿದರೆ ವಿದ್ಯುತ್ ತಂತಿಗಳ ಏರುಪೇರಿನಿಂದ ಏನಾದಾರೂ ಅವಘಡ ಸಂಭವಿಸಬಹುದು.**

### ಅಸೋಸಿಯೇಷನ್ ವಾದವೇನು?

**ವಿದ್ಯುತ್ ಗ್ರಾಹಕರ ಹಕ್ಕುಗಳ ತಿದ್ದುಪಡಿ ನಿಯಮ 2024 ಅನ್ವಯ, ಫ್ಲ್ಯಾಟ್ ಮಾಲೀಕರು ಪ್ರತ್ಯೇಕ ವಿದ್ಯುತ್ ಸಂಪರ್ಕ ಪಡೆದುಕೊಳ್ಳಬೇಕು. ಇಲ್ಲವಾದರೆ ಅಪಾರ್ಟ್ ಮೆಂಟ್‌ನ ಇತರೆ ಮಾಲೀಕರ ಮೇಲೆ ಪ್ರತಿಕೂಲ ಪರಿಣಾಮಗಳಾಗುತ್ತವೆ ಎಂದು ಅಸೋಸಿಯೇಷನ್ ವಾದ ಮುಂದಿಟ್ಟಿತ್ತು.**

### ಬೆಸ್ಕಾಂ ವಾದವೇನು?

**ಬೆಸ್ಕಾಂ ಪರ ವಕೀಲರು, ಅರ್ಜಿದಾರರು ಬೇಕಿದ್ದರೆ ತಮಗಿರುವ ವಿದ್ಯುತ್ ಮೀಟರ್‌ನಿಂದ ಪ್ರತ್ಯೇಕ ವೈರ್ ಪಡೆದು ತಮ್ಮ ಎಲೆಕ್ಟ್ರಿಕ್ ವಾಹನಕ್ಕೆ ಚಾರ್ಜಿಂಗ್ ಪಾಯಿಂಟ್ ಅಳವಡಿಸಿಕೊಳ್ಳಬಹುದು. ಅಲ್ಲದೆ, ಕಾರ್ಯಾಚರಣೆ ನಿಯಮಗಳ ಪ್ರಕಾರ ಫ್ಲ್ಯಾಟ್ ಮಾಲೀಕರು ಹಾಲಿ ಇರುವ ಪೇ ಲೋಡ್‌ನಡಿಯೇ ದ್ವಿಚಕ್ರ ಅಥವಾ ನಾಲ್ಕು ಚಕ್ರದ ಎಲೆಕ್ಟ್ರಿಕ್ ವಾಹನಕ್ಕೆ ಚಾರ್ಜಿಂಗ್ ಪಾಯಿಂಟ್ ಅಳವಡಿಸಿಕೊಳ್ಳಬಹುದು.**

**ಇಲ್ಲವೇ ಹೆಚ್ಚಿನ ಸಾಮರ್ಥ್ಯದ ಚಾರ್ಜಿಂಗ್ ಪಾಯಿಂಟ್ ಬೇಕಿದ್ದರೆ ಹೊಸ ವಿದ್ಯುತ್ ಸಂಪರ್ಕ ಪಡೆದುಕೊಳ್ಳಬೇಕಾಗುತ್ತದೆ'' ಎಂದು ಹೇಳಿದ್ದರು.**

## ವೈಷ್ಣೋದೇವಿ ಯಾತ್ರೆಗೂ ಸಹಾಯಧನ ನೀಡಲು ಯೋಜನೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ಮುಜರಾಯಿ ಇಲಾಖೆಯು ಕಾಶಿ ಯಾತ್ರೆ ಮಾದರಿಯಲ್ಲೇ ವೈಷ್ಣೋದೇವಿ ಯಾತ್ರೆಗೂ ಸಹಾಯಧನ ನೀಡಲು ಚಿಂತನೆ ನಡೆಸಿದೆ. ಜಮ್ಮು - ಕಾಶ್ಮೀರದ ಪ್ರಸಿದ್ಧ ವೈಷ್ಣೋದೇವಿದೇವಾಲಯಕ್ಕೆ ತೆರಳುವ ಯಾತ್ರಾರ್ಥಿಗಳಿಗೆ ಸಹಾಯಧನ ನೀಡುವ ಯೋಜನೆ ಜಾರಿಗೆ ತರಲು ಉದ್ದೇಶಿಸಲಾಗಿದೆ. ಇನ್ನು ಕಾಶಿ, ಚಾರ್‌ಧಾಮ್, ಮಾನಸ ಸರೋವರದ ಯಾತ್ರೆಯಂತೆ ವೈಷ್ಣೋದೇವಿ ಯಾತ್ರೆಗೆ ಸಹಾಯಧನ ದೊರಕಲಿದೆ. ಯಾತ್ರಾರ್ಥಿಗಳು ಸಹಾಯಧನ ಪಡೆಯಲು ಯಾತ್ರೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಒದಗಿಸಿದರೆ 5 ಸಾವಿರ ರೂ.ಗಳನ್ನು ನೀಡಲಾಗುತ್ತದೆ. ಇದಕ್ಕಾಗಿ ಮುಜರಾಯಿ ಇಲಾಖೆಯು ಮಾರ್ಗಸೂಚಿ ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸಿದೆ. ಅನುಮತಿ ದೊರೆತ ಕೂಡಲೇ ಯೋಜನೆಗೆ ಚಾಲನೆ ದೊರೆಯಲಿದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಯಾತ್ರೆ ಸಂಬಂಧ ಕಳೆದ ವರ್ಷ ಸಚಿವ ರಾಮಲಿಂಗಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಯಿತು.

ಯಾತ್ರಾರ್ಥಿಗಳು ಪ್ರಯಾಣದ ಟಿಕೆಟ್, ಜಿಪಿಎಸ್ ಫೋಟೊ, ವಯಸ್ಸಿನ ದೃಢೀಕರಣ ಪತ್ರ, ಆಧಾರ್ ಕಾರ್ಡ್ ಪ್ರತಿ, ನೋಟರಿ ಮಾಡಿಸಿದ ಛಾಪಾ ಕಾಗದ ಸೇರಿ ಅಗತ್ಯ ದಾಖಲೆಗಳೊಂದಿಗೆ ಸೇವಾ ಸಿಂಧು ಮೂಲಕ ಆನ್‌ಲೈನ್‌ನಲ್ಲಿ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಬೇಕು. ಆನಂತರ ಸಹಾಯಧನ ಪಾವತಿಸಲಾಗುತ್ತದೆ. ಸಹಾಯಧನ ಸೌಲಭ್ಯ ಮುಜರಾಯಿ ಇಲಾಖೆ ಬಹಳ ವರ್ಷಗಳಿಂದ ಮಾನಸ ಸರೋವರ ಯಾತ್ರೆ ಮಾಡಿದವರಿಗೆ 30 ಸಾವಿರ ರೂ. ಹಾಗೂ ಚಾರ್‌ಧಾಮ್ (ಗಂಗೋತ್ರಿ, ಯಮುನೋತ್ರಿ, ಕೇದಾರ, ಬದರಿನಾಥ) ಯಾತ್ರೆಗೆ 20 ಸಾವಿರ ರೂ. ಹಾಗೂ ಇತ್ತೀಚೆಗೆ ಕಾಶಿ ಯಾತ್ರೆಗೆ 5 ಸಾವಿರ ಸಹಾಯಧನ ನೀಡುತ್ತಿದೆ.

2025ರಲ್ಲಿ ಕಾಶಿ ಯಾತ್ರೆ ಕೈಗೊಂಡಿದ್ದ 8,197 ಮಂದಿ, ಮಾನಸ ಸರೋವರಕ್ಕೆ ತೆರಳಿದ್ದ 812 ಮಂದಿ ಹಾಗೂ ಚಾರ್‌ಧಾಮ್ ಯಾತ್ರೆ ಮಾಡಿದ್ದ 4,241 ಮಂದಿ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ.

## ಬಿಕ್ಲು ಶಿವ ಕೊಲೆ ಪ್ರಕರಣ: ಶಾಸಕ ಭೈರತಿ ಬಸವರಾಜ್‌ಗೆ 7 ದಿನ CID ಕಸ್ಟಡಿ

### ವೈದ್ಯಕೀಯ ವರದಿಯನ್ನು ನ್ಯಾಯಾಧೀಶರ ಮುಂದಿಟ್ಟರು

• ಉದಯವಾಹಿನಿ ,ಬೆಂಗಳೂರು


ಉದಯವಾಹಿನಿ ಚಿತ್ರ

ಬಿಕ್ಲು ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭೈರತಿ ಬಸವರಾಜ್ ಅವರನ್ನು ನ್ಯಾಯಾಲಯ 7 ದಿನಗಳ ಕಾಲ ಸಿಐಡಿ ವಶಕ್ಕೆ ಒಪ್ಪಿಸಿದೆ. ಕೋರಮಂಗಲದಲ್ಲಿರುವ 42ನೇ ಎಸಿಜೆಎಂ ನ್ಯಾಯಾಲಯದ ಮುಂದೆ ಅವರನ್ನು ಹಾಜರುಪಡಿಸಿದ ವೇಳೆ ಈ ಆದೇಶ ನೀಡಲಾಗಿದೆ. ವಿಚಾರಣೆ ವೇಳೆ ತನಿಖಾಧಿಕಾರಿಗಳು ಶಾಸಕರ ಆರೋಗ್ಯ ಪರಿಶೀಲನೆಗೆ ಸಂಬಂಧಿಸಿದ ವೈದ್ಯಕೀಯ ವರದಿಯನ್ನು ನ್ಯಾಯಾಧೀಶರ ಮುಂದಿಟ್ಟರು. ಅದನ್ನು ಪರಿಶೀಲಿಸಿದ ಬಳಿಕ ಹೆಚ್ಚಿನ ವಿಚಾರಣೆ ಅಗತ್ಯವಿದೆ ಎಂದು ತಿಳಿಸಿ ಸಿಐಡಿ ವಶಕ್ಕೆ ನೀಡಲು ನ್ಯಾಯಾಲಯ ತೀರ್ಮಾನಿಸಿದೆ.

**ಶಾಸಕರ ವಿಚಾರಣೆ ಅಗತ್ಯ**

ಅಹಮದಾಬಾದ್‌ನಿಂದ ನಗರಕ್ಕೆ ಆಗಮಿಸಿದ್ದ ಅವರನ್ನು ಪೊಲೀಸರು ಬಂಧಿಸಿದ್ದರು.

ನಂತರ ನಡೆದ ಆರೋಗ್ಯ ತಪಾಸಣೆಯಲ್ಲಿ ಹೃದಯ ಸಂಬಂಧಿತ ಸಮಸ್ಯೆ ಕಾಣಿಸಿಕೊಂಡ ಕಾರಣ ಆಸ್ಪತ್ರೆಗೆ ದಾಖಲಿಸಿ ಪರೀಕ್ಷೆ ನಡೆಸಲಾಗಿತ್ತು.

ಇದರ ನಡುವೆ ಜಾಮೀನು ಪಡೆಯಲು ಮೇಲ್ಮಟ್ಟದ ನ್ಯಾಯಾಲಯವನ್ನು ಸಂಪರ್ಕಿಸಿದರೂ ಅವರಿಗೆ ಅನುಕೂಲಕರ ಆದೇಶ ಸಿಗಲಿಲ್ಲ. ಪ್ರಕರಣದಲ್ಲಿ ನಡೆದ ಘಟನೆಗಳ ಸರಣಿಯನ್ನು ಗಮನಿಸಿ ಶಾಸಕರ ವಿಚಾರಣೆ ಅಗತ್ಯ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

## ಬೆಂಗಳೂರಿನ ಡಬಲ್ ಡೆಕ್ಕರ್ ಯೋಜನೆ ಬಗ್ಗೆ ಕೇಂದ್ರ ಕಳವಳ


ಉದಯವಾಹಿನಿ ಚಿತ್ರ

• ಉದಯವಾಹಿನಿ ,ಬೆಂಗಳೂರು

ಬೆಂಗಳೂರಿನ ಡಬಲ್ ಡೆಕ್ಕರ್ ಯೋಜನೆ ಬಗ್ಗೆ ಕೇಂದ್ರ ಸರ್ಕಾರ ಕಳವಳ ವ್ಯಕ್ತಪಡಿಸಿದ್ದು, ರೆಡ್ ಸಿಗ್ನಲ್ ನೀಡಿದೆ ಎಂದು ಹೇಳಲಾಗಿದೆ.

ನಗರದ ಸಂಚಾರ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಪ್ರಸ್ತಾಪಿಸಿರುವ ಹೆಬ್ಬಾಳ-ಸರ್ಜಾಪುರ ಕೆಂಪು ಮಾರ್ಗದ ಮೆಟ್ರೋ ಯೋಜನೆಗೆ ಮತ್ತೆ ಅಡೆತಡೆ ಎದುರಾಗಿದ್ದು, ಕೇಂದ್ರ ಡಬಲ್ ಡೆಕ್ಕರ್ ರಸ್ತೆ-ಕಮ್-ಮೆಟ್ರೋ ಮಾದರಿ ಮರುಪರಿಶೀಲಿಸಲು ರಾಜ್ಯ ಸರ್ಕಾರವನ್ನು ಕೇಳಿದೆ. ಈ ಯೋಜನೆ ನಮ್ಮ ಮೆಟ್ರೋ ಹಂತ 3ಎ ಭಾಗವಾಗಿದ್ದು, ವಿವರವಾದ ಯೋಜನಾ ವರದಿ (ಡಿಪಿಆರ್) ಎರಡನೇ ಬಾರಿ ಕೇಂದ್ರದಿಂದ ಹಿಂತಿರುಗಿಸಲಾದೆ.

ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಮೂಲ ಉದ್ದೇಶಕ್ಕೆ ವಿನ್ಯಾಸ ಹಾನಿ ಉಂಟುಮಾಡಬಹುದು ಎಂಬ ಕಾರಣದಿಂದ ಕೇಂದ್ರವು ಸಂಪೂರ್ಣ ಮರುಪರಿಶೀಲನೆಗೆ ಸೂಚಿಸಿದೆ.

ಈ ಯೋಜನೆಗೆ ರಾಜ್ಯ ಸಚಿವ ಸಂಪುಟವು ಈಗಾಗಲೇ ಸಾವಿರಾರು ಕೋಟಿ ರೂ. ವೆಚ್ಚಕ್ಕೆ ಅನುಮೋದನೆ ನೀಡಿತ್ತು. ಪ್ರತಿ ಕಿಲೋಮೀಟರ್‌ಗೆ ಹೆಚ್ಚಿನ ವೆಚ್ಚವಾಗುತ್ತಿರುವುದರಿಂದ ಇದು ಅತ್ಯಂತ ದುಬಾರಿ ಮೆಟ್ರೋ ಯೋಜನೆಗಳಲ್ಲೊಂದು ಎಂದು ಪರಿಗಣಿಸಲಾಗಿದೆ.

## ಚಿರತೆ ದಾಳಿಗೊಳಗಾದ ಸಿಬ್ಬಂದಿಗೆ ಶಸ್ತ್ರಚಿಕಿತ್ಸೆ

• ಉದಯವಾಹಿನಿ ,ಬೆಂಗಳೂರು

ಬೆಂಗಳೂರು ಹೊರವಲಯದ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಚಿರತೆ ದಾಳಿ ಮಾಡಿದ ಪರಿಣಾಮ ಗಂಭೀರ ಗಾಯಗೊಂಡಿದ್ದ ಸಿಬ್ಬಂದಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಬನ್ನೇರುಘಟ್ಟ ಜೈವಿಕ ಉದ್ಯಾನವನ (ಬಿಬಿಪಿ) ರಕ್ಷಣಾ ಕೇಂದ್ರದಲ್ಲಿ ಶುಕ್ರವಾರ ಚಿರತೆಯ ದಾಳಿಯಿಂದ 47 ವರ್ಷದ ಮೃಗಾಲಯದ ಸಿಬ್ಬಂದಿ ಶಾಂತಪ್ಪ ಅವರ ಮುಖಕ್ಕೆ ಗಂಭೀರ ಗಾಯಗಳಾಗಿತ್ತು. ಗಾಯಗೊಂಡಿದ್ದ ಪ್ರಾಣಿ ಪಾಲಕ ಶಾಂತಪ್ಪರನ್ನ ಜಿಗಣಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.

ಶಾಂತಪ್ಪ ಪ್ರಾಣಿಗಳ ಆವರಣವನ್ನು ಸ್ವಚ್ಛಗೊಳಿಸುತ್ತಿದ್ದಾಗ ಚಿರತೆ ಅವರ ಮೇಲೆ ದಾಳಿ ಮಾಡಿ ಗೀಚಿದೆ. ಸ್ವಚ್ಛಗೊಳಿಸುವಾಗ ಸುರಕ್ಷತಾ ಕ್ರಮವಾಗಿ ಪ್ರಾಣಿಗಳನ್ನು ಬೇರೆ ಆವರಣಕ್ಕೆ ಸ್ಥಳಾಂತರಿಸಲಾಗಿದೆ ಎಂದು ಮೃಗಾಲಯದ ಅಧಿಕಾರಿಗಳು ತಿಳಿಸಿದ್ದಾರೆ. ಶಾಂತಪ್ಪ ಆವರಣದ ಹತ್ತಿರ ಹೋದರು. ಈ ವೇಳೆ ಚಿರತೆ ದಾಳಿ ಮಾಡಿದೆ.

ಈ ಬಗ್ಗೆ ಬಿಬಿಪಿ ಕಾರ್ಯನಿರ್ವಾಹಕ ನಿರ್ದೇಶಕ ಎವಿ ಸೂರ್ಯ ಸೇನ್ ಮಾತನಾಡಿ, ಶಾಂತಪ್ಪ ಹಲವಾರು ವರ್ಷಗಳಿಂದ ಚಿರತೆಗಳನ್ನು ನಿರ್ವಹಿಸುತ್ತಿದ್ದಾರೆ ಮತ್ತು ಅವರು ಅನುಭವಿ ಮತ್ತು ಜಾಗರೂಕರಾಗಿದ್ದಾರೆ. ಎಲ್ಲಾ ಪ್ರಾಣಿಗಳು ಮತ್ತು ಸಿಬ್ಬಂದಿಗೆ ಲಸಿಕೆ ಹಾಕಲಾಗಿದೆ. ಹೀಗಾಗಿ ಯಾವುದೇ ರೋಗ ಹರಡುವ ಸಾಧ್ಯತೆಗಳು ಇಲ್ಲ ಎಂದರು. ಇತ್ತೀಚಿನ ದಿನಗಳಲ್ಲಿ ಇದು ಮೊದಲ ಘಟನೆಯಾಗಿದೆ. ಒಂದೆರಡು


ಉದಯವಾಹಿನಿ ಚಿತ್ರ

ವರ್ಷಗಳ ಹಿಂದೆ ಹುಲಿಯೊಂದು ಮೃಗಾಲಯದ ಪಾಲಕರನ್ನು ಗಾಯಗೊಳಿಸಿದಾಗ ಇದೇ ರೀತಿಯ ದಾಳಿ ಸಂಭವಿಸಿದೆ ಎಂದು ಅವರು ಹೇಳಿದರು. ಶಾಂತಪ್ಪ ಎಲ್ಲಾ ವೈದ್ಯಕೀಯ ವೆಚ್ಚಗಳನ್ನು ಆಡಳಿತ ಮಂಡಳಿಯೇ ಭರಿಸುತ್ತಿದೆ ಮತ್ತು ಶಾಂತಪ್ಪ ಜಿಗಣಿಯಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸೇನ್ ಹೇಳಿದರು. ಮೂಲಗಳ ಪ್ರಕಾರ ಇಲ್ಲಿ 80 ಚಿರತೆಗಳಿದ್ದು, 21 ಚಿರತೆಗಳು ಮೃಗಾಲಯದ ಸಫಾರಿ ಪ್ರದೇಶದಲ್ಲಿವೆ ಎನ್ನಲಾಗಿದೆ.

**ನೌಕರಿ ಖಾಯಂಗೆ ಪತ್ನಿ ಒತ್ತಾಯ:** ಇನ್ನು ಘಟನೆ ಬಗ್ಗೆ ಶಾಂತಪ್ಪ ಪತ್ನಿ ಜಯಮ್ಮ ಪ್ರತಿಕ್ರಿಯಿಸಿದ್ದು, ಬನ್ನೇರುಘಟ್ಟ ಝೂನಲ್ಲಿ ಕಳೆದ 25 ವರ್ಷದಿಂದ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಕಾಡೆಮ್ಮೆ ದಾಳಿಯಿಂದ ಗಾಯಗೊಂಡಿದ್ದರು. ಇದೀಗ ಚಿರತೆ ದಾಳಿ ಮಾಡಿದೆ. ಅವರೇ ಮನೆಗೆ ಆಧಾರವಾಗಿದ್ದರು. ಹೀಗಾಗಿ ಅವರನ್ನ ಖಾಯಂ ನೌಕರರನ್ನಾಗಿ ಮಾಡಿಕೊಳ್ಳಬೇಕು ಮತ್ತು ಗುತ್ತಿಗೆ ಕಾರ್ಮಿಕರಿಗೆ ಆರ್ಥಿಕ ಭದ್ರತೆ ಒದಗಿಸಬೇಕು ಎಂದು ಅವರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

**ದೇವಸ್ಥಾನಗಳಲ್ಲಿ ಭಕ್ತ ಸಾಗರ**



**ಶಿವರಾತ್ರಿ ಸಡಗರ ಮತ್ತು ಭಕ್ತಿಯಿಂದ ಆಚರಣೆ**

## ಮಹಾ ಶಿವರಾತ್ರಿ : ರಾಜ್ಯದಲ್ಲೆಡೆ ಶಿವನಾಮ

• ಉದಯವಾಹಿನಿ ,ಬೆಂಗಳೂರು

ಮಹಾ ಶಿವರಾತ್ರಿ ಹಬ್ಬದ ಅಂಗವಾಗಿ ನಾಡಿನ ಪ್ರಮುಖ ಶಿವ ದೇವಾಲಯಗಳಿಗೆ ಭಕ್ತ ಸಾಗರವೇ ಹರಿದು ಬಂದಿದೆ. ಮುಂಜಾನೆಯಿಂದಲೇ ಸರತಿ ಸಾಲಿನಲ್ಲಿ ನಿಂತು ಶಿವನ ದರ್ಶನ ಪಡೆಯುತ್ತಿರುವ ದೃಶ್ಯಗಳು ದೇವಾಲಯಗಳಲ್ಲಿ ಕಂಡು ಬಂದಿತು.

ಮಹದೇಶ್ವರ ಬೆಟ್ಟದ ಮಲೈ ಮಹದೇಶ್ವರ ದೇವಾಲಯ, ಆದಿ ಚುಂಚನಗಿರಿಯ ಕಾಲಭೈರವೇಶ್ವರಸ್ವಾಮಿ ದೇವಾಲಯ, ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ, ಧರ್ಮಸ್ಥಳ ಮಂಜುನಾಥ ದೇವಾಲಯ, ಕದ್ರಿಯ ಮಂಜುನಾಥ, ಗೋಕರ್ಣದ ಮಹಾಬಲೇಶ್ವರ, ಮುರುಡೇಶ್ವರ, ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಾಲಯ, ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಾಲಯ ಸೇರಿದಂತೆ ನಾಡಿನ ಪ್ರಮುಖ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಶಿವರಾತ್ರಿ ಹಬ್ಬದ ಅಂಗವಾಗಿ ಶಿವದೇವಾಲಯಗಳನ್ನು ತಳಿರು ತೋರಣಗಳಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು. ಪೂಜೆಯ ಜೊತೆಗೆ ಶಿವಸ್ತುತಿಯನ್ನು ಪಾರಾಯಣ ಮಾಡಲಾಗುತ್ತಿದೆ. ರಾತ್ರಿ ಜಾಗರಣೆಯ ಕಾರ್ಯಕ್ರಮಗಳನ್ನು ಹಮಿಕೊಳ್ಳಲಾದೆ. ದೇವಾಲಯಗಳಲ್ಲಿ ಪೂಜೆ ಜಾಗರಣೆಯ ಹಮಿಕೊಳ್ಳಲಾಗಿದೆ. 2



### ದರ್ಶನಕ್ಕೆ ನೂಕುನುಗ್ಗಲು

**ಕೆಲವು ದೇವಸ್ಥಾನಗಳಲ್ಲಿ ಪ್ರಸಾದ ವಿನಿಯೋಗ ನಡೆಯಿತು. ಸರದಿಯಲ್ಲಿ ಭಕ್ತರು ಪ್ರಸಾದ ಸೇವಿಸಿದರು. ದೇಗುಲಗಳಲ್ಲಿ ದರ್ಶನಕ್ಕೆ ನೂಕುನುಗ್ಗಲು ಸಹ ಇತ್ತು. ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಹೂವಿನಲ್ಲಿ ಮಾಡಿದ ಬೃಹದಾಕಾರದ ಶಿವಲಿಂಗ ಆಕರ್ಷಣೆಯ ಕೇಂದ್ರವಾಗಿತ್ತು.**

**ಪ್ರಮುಖ ದೇವಾಲಯಗಳಲ್ಲಿ ರಾತ್ರಿ ಜಾಗರಣೆಗೆ ವ್ಯವಸ್ಥೆ ಮಾಡಲಾಗಿತ್ತು. ಜಾಗರಣೆ ಅಂಗವಾಗಿ ನಾಟಕೋತ್ಸವ, ಸಂಗೀತೋತ್ಸವ, ಕಾವ್ಯೋತ್ಸವ ಆಯೋಜಿಸಲಾಗಿತ್ತು. ದೀಪೋತ್ಸವ ವಿಶೇಷ ಮೆರುಗು ನೀಡಿತು.**

**ಕತ್ತಲು ಆವರಿಸುತ್ತಿದ್ದಂತೆ ಶಿವನ ಆರಾಧನೆಯ ತಾಣಗಳು ವಿದ್ಯುತ್ ದೀಪಗಳಿಂದ ಕಂಗೊಳಿಸಿದವು, ತಳಿರು, ತೋರಣಗಳು ಮಹಾಶಿವರಾತ್ರಿ ಮೆರುಗು ಹೆಚ್ಚಿಸಿದವು.**

**ಮಹಾಶಿವರಾತ್ರಿ ಮೆರುಗು**

## ಬೇಸಿಗೆಗೂ ಮುನ್ನವೇ ಬಿರುಬಿಸಿಲಿನ ಬೇಗೆ ಶುರು

• ಉದಯವಾಹಿನಿ ,ಬೆಂಗಳೂರು


ರಾಜ್ಯದಲ್ಲಿ ಬೇಸಿಗೆಗೂ ಮುನ್ನವೇ ಬಿಸಿಲಿನ ತೀವ್ರತೆ ಹೆಚ್ಚಾಗಿದ್ದು, ಜನರು ತತ್ತರಿಸುವಂತೆ ಮಾಡಿದೆ. ಶಿವರಾತ್ರಿ ಹಬ್ಬದ ವೇಳೆಗೆ ಚಳಿ ದೂರ ಸರಿಯುತ್ತದೆ ಎಂಬ ಪ್ರತೀತಿ ಇದೆ. ಆದರೆ, ಮುಂಜಾನೆ ಇನ್ನೂ ತೀವ್ರವಾದ ಚಳಿ ಇರುತ್ತದೆ. ಕನಿಷ್ಠ ತಾಪಮಾನದಲ್ಲಿ ಏರಿಕೆ ಕಂಡು ಬಂದಿಲ್ಲ.

ಕರಾವಳಿ ಭಾಗದ ಜಿಲ್ಲೆಗಳನ್ನು ಹೊರತು ಪಡಿಸಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ 10ರಿಂದ 12ಡಿ.ಸೆ.ನಷ್ಟು ದಾಖಲಾಗುತ್ತಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಾತ್ರ 12ರಿಂದ 14 ಡಿ.ಸೆ.ನಷ್ಟು ಕಂಡುಬರುತ್ತಿದೆ.

ಇನ್ನು ಮುಂದೆ ಚಳಿಯ ಪ್ರಮಾಣ ಕಡಿಮೆಯಾಗಲಿದ್ದು, ಬಿಸಿಲಿನ ತೀವ್ರತೆ ಹೆಚ್ಚಾಗಲಿದೆ. ಬೆಂಗಳೂರು ಸೇರಿದಂತೆ ದಕ್ಷಿಣ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ 10ರಿಂದ 11 ಡಿ.ಸೆ.ನಷ್ಟು ಕಂಡು ಬರುತ್ತಿದೆ. ಆದರೂ ಗರಿಷ್ಠ ತಾಪಮಾನದಲ್ಲಿ ನಿರಂತರ ಏರಿಕೆಯಾಗಿದೆ. ರಾತ್ರಿಗಿಂತ ಹಗಲಿನ ವೇಳೆ ಹೆಚ್ಚಾಗುತ್ತಾ ಹೋಗುವುದರಿಂದ ಬಿಸಿಲಿನ ಬೇಗೆ ಹೆಚ್ಚಾಗಿರುತ್ತದೆ.

ಕಳೆದ ಅ.ನಿಂದ ರಾಜ್ಯದಲ್ಲಿ ಮಳೆಯ ಅಭಾವ ಉಂಟಾಗಿದೆ. ಅಕಾಲಿಕ ಮಳೆಯೂ ಆಗಿಲ್ಲ.

ಸದ್ಯಕ್ಕೆ ಬೇಸಿಗೆ ಮಳೆಯಾಗುವ ಮುನ್ಸೂಚನೆಗಳೂ ಇಲ್ಲ. ಹೀಗಾಗಿ ವಾತಾವರಣದಲ್ಲಿ ಉಷ್ಣಾಂಶ ಗಣನೀಯವಾಗಿ ಏರುತ್ತಾ ಹೋಗಲಿದೆ. ಈಗಾಗಲೇ ಮಧ್ಯಾಹ್ನದ ವೇಳೆ ಬಿಸಿಲಿಗೆ ಜನರು


ಉದಯವಾಹಿನಿ ಚಿತ್ರ

ಹೈರಾಣಾವಾಗುತ್ತಿದ್ದಾರೆ. ಹಣ್ಣು, ಎಳನೀರು, ಮಜ್ಜಿಗೆ ಹಾಗೂ ತಂಪು ಪಾನೀಯಗಳ ಮೊರೆ ಹೋಗುತ್ತಿದ್ದಾರೆ. ರಾಜ್ಯದ ಪ್ರಮುಖ ಜಲಾಶಯಗಳು ಪೂರ್ಣವಾಗಿ ಭರ್ತಿಯಾದ್ದ ಹಿನ್ನೆಲೆಯಲ್ಲಿ ಕಳೆದ ಬಾರಿಯಂತೆ ಈ ಬಾರಿಯೂ ಸಾಕಷ್ಟು ನೀರಿದ್ದು, ನೀರಾವರಿ ಬೆಳೆಗಳಿಗೆ ಹಾಗೂ ಆಯಾ ಜಲಾಶಯಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೂ ತೊಂದರೆಯಾಗುವ ಸಾಧ್ಯತೆಗಳು ವಿರಳ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ ಈಗಾಗಲೇ 32 ಡಿ.ಸೆ.ಗಿಂತ ಹೆಚ್ಚಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ 35 ಡಿ.ಸೆ.ಗಿಂತ ಹೆಚ್ಚಾಗಿರುವುದು ದಾಖಲಾಗುತ್ತಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿ ಸರಾಸರಿ 33 ಡಿ.ಸೆ.ನಷ್ಟು ಗರಿಷ್ಠ ತಾಪಮಾನ ದಾಖಲಾಗುತ್ತಿದೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಬಿಸಿಲಿನ ಪ್ರಖರತೆ ಇನ್ನಷ್ಟು ಹೆಚ್ಚಾಗಲಿದ್ದು, ಈಗಿರುವ ಗರಿಷ್ಠ ತಾಪಮಾನಕ್ಕಿಂತ 4ರಿಂದ 5ಡಿ.ಸೆ.ನಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಬಿಸಿಲಿನ ತೀವ್ರತೆ ಹೆಚ್ಚಾಗುವುದರಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲು, ಸಾಧ್ಯವಾದಷ್ಟು ನೆರಳಿನಲ್ಲಿ ಕೆಲಸ ಮಾಡಲು ಹಾಗೂ ಹೆಚ್ಚು ದ್ರವ ಪದಾರ್ಥಗಳನ್ನು ಸೇವಿಸಲು ವೈದ್ಯರು ಹಾಗೂ ಹವಾಮಾನ ತಜ್ಞರು ಸಲಹೆ ಮಾಡಿದ್ದಾರೆ. ಬಿಸಿಲಿನಲ್ಲಿ ಅನಿವಾರ್ಯವಾಗಿ ಕೆಲಸ ಮಾಡಬೇಕಾದರೆ ಕೊಡೆ, ಟೋಪಿಗಳಂತಹ ಆಸರೆ ಪಡೆಯುವುದು ಅಗತ್ಯವಾಗಿದೆ.

**ಮುಂಜಾನೆ ಇನ್ನೂ ತೀವ್ರವಾದ ಚಳಿ**


ಉದಯವಾಹಿನಿ
ಪ್ರಾದೇಶಿಕ
ಸೋಮವಾರ 16 ಫೆಬ್ರವರಿ 2026


# ತ್ರಿನೇಶ್ವರ ಸ್ವಾಮಿಗೆ 11 ಕೆ.ಜಿಯ ಚಿನ್ನದ ಮುಖವಾಡ ತೊಡಿಸಿ ವಿಶೇಷ ಪೂಜೆ

• **ಉದಯವಾಹಿನಿ, ಮೈಸೂರು**

ಮಹಾಶಿವರಾತ್ರಿ ಪ್ರಯುಕ್ತ ಅರಮನೆ ಆವರಣದಲ್ಲಿರುವ ತ್ರಿನೇಶ್ವರ ಸ್ವಾಮಿಗೆ 11 ಕೆ.ಜಿಯ ಚಿನ್ನದ ಮುಖವಾಡ ಅರ್ಪಿಸಿ, ವಿಶೇಷ ಪೂಜೆ ಸಲ್ಲಿಸಲಾಯಿತು. ಇದಕ್ಕೂ ಮುನ್ನ, ಮುಂಜಾನೆ ಸ್ವಾಮಿಯ ಕೊಳಗಕ್ಕೆ ವಿವಿಧ ಅಭಿಷೇಕಗಳು ನಡೆದವು. ನಂತರ ಸಾರ್ವಜನಿಕ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

ಮುಂಜಾನೆಯಿಂದ ರಾತ್ರಿವರೆಗೂ ತ್ರಿನೇಶ್ವರನ ದರ್ಶನಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲಿದ್ದು, ಅರಮನೆಗೆ ಎಸಿಪಿ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಚಿನ್ನದ ಕೊಳಗದ **ಐತಿಹಾಸಿಕ ಹಿನ್ನೆಲೆ:** ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಗಂಡು ಮಕ್ಕಳಿರಲಿಲ್ಲ. ಗಂಡು ಮಕ್ಕಳು ಜನಿಸಿದರೆ ಅರಮನೆಯ ತ್ರಿನೇಶ್ವರ, ನಂಜನಗೂಡಿನ ನಂಜುಂಡೇಶ್ವರ ಹಾಗೂ ಮಲೆಮಹದೇಶ್ವರ ಬೆಟ್ಟದ ಮಹದೇಶ್ವರನಿಗೆ ಚಿನ್ನದ ಕೊಳಗ ಮಾಡಿಸಿಕೊಡುವುದಾಗಿ ಹರಕೆ ಹೊತ್ತಿದ್ದರಂತೆ.ಮುಂದೆ ಒಡೆಯರ್‌ಗೆ



ಗಂಡು ಮಗು ಜನಿಸಿದ್ದು, ಹರಕೆಯಂತೆ ತ್ರಿನೇಶ್ವರನಿಗೆ 11 ಕೆ.ಜಿಯ ಚಿನ್ನದ ಮುಖವಾಡ, ನಂಜನಗೂಡಿನ ನಂಜುಂಡೇಶ್ವರ ಹಾಗೂ ಮಲೆಮಹದೇಶ್ವರನಿಗೆ ಮೂರು ಚಿನ್ನದ ಕೊಳಗವನ್ನು ಅವರು ಮಾಡಿ ಕೊಟ್ಟಿದ್ದಾರೆ. ಅಂದಿನಿಂದ 11 ಕೆ.ಜಿಯ ತೂಕದ ಚಿನ್ನದ ಕೊಳಗವನ್ನು ಶಿವರಾತ್ರಿಯ ದಿನ ತ್ರಿನೇಶ್ವರನಿಗೆ ತೊಡಿಸಿ ಪೂಜೆ ಸಲ್ಲಿಸುವುದು ವಾಡಿಕೆ. ಮಹದೇಶ್ವರ ಬೆಟ್ಟದಲ್ಲಿರುವ ಮಹದೇಶ್ವರ ಸ್ವಾಮಿ ಹಾಗೂ ನಂಜನಗೂಡು ನಂಜುಂಡೇಶ್ವನಿಗೆ ಶಾಶ್ವತವಾಗಿ ಚಿನ್ನದ ಕೊಳಗ ಧಾರಣೆ ಮಾಡಿದ್ದರಿಂದ ಪ್ರತಿನಿತ್ಯ ಪೂಜೆ ನಡೆಯುತ್ತದೆ. ಅರಮನೆಯಲ್ಲಿ ತ್ರಿನೇಶ್ವರ ಸ್ವಾಮಿಗೆ ಕೊಳಗ ಧಾರಣೆ ಮಾಡಿ ನಿತ್ಯ ಪೂಜಿಸುವುದು ಕಷ್ಟವಾಗುವ ಹಿನ್ನೆಲೆಯಲ್ಲಿ ವರ್ಷಕ್ಕೊಮ್ಮೆ ಶಿವರಾತ್ರಿಯಂದು ಮುಖವಾಡ ತೊಡಿಸಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ನಂತರ ಜಿಲ್ಲಾಧಿಕಾರಿ ಖಜಾನೆಗೆ ಕೊಳಗ ಸೇರುತ್ತದೆ.

ಇದಕ್ಕೂ ಮುನ್ನ, ಮಹಾಶಿವರಾತ್ರಿ ಆಚರಣೆಗಾಗಿ ತ್ರಿನೇಶ್ವರನಿಗೆ ಧರಿಸುವ ಚಿನ್ನದ ಬಾಲ ಶಿವನ ಮುಖವಾಡ, ಮತ್ತಿತರ ವಸ್ತುಗಳನ್ನು ಜಿಲ್ಲಾ ಖಜಾನೆಯಿಂದ ಭದ್ರತೆಯಲ್ಲಿ ದೇವಾಲಯದ ಅರ್ಚಕರಿಗೆ ಹಸ್ತಾಂತರಿಸಲಾಯಿತು.

ದೇವಾಲಯಕ್ಕೆ ಮುಖವಾಡ ಆಗಮಿಸಿತ್ತು.ಭಾನುವಾರ ಬೆಳಗ್ಗೆ ತ್ರಿನೇಶ್ವರ ಸ್ವಾಮಿಯ ಮೂಲ ಮೂರ್ತಿಗೆ ಅಭಿಷೇಕ, ರುದ್ರಾಭಿಷೇಕ ನೆರವೇರಿಸಿದ ಬಳಿಕ ಚಿನ್ನದ ಶಿವನ ಮುಖವಾಡದ ಕೊಳಗ ತೊಡಿಸಲಾಗುತ್ತದೆ. ಶಿವರಾತ್ರಿಯ ದಿನ ನಾಲ್ಕು ಯಾಮದ ಪೂಜೆ ನಡೆಯುತ್ತದೆ. ಸೋಮವಾರ ಬೆಳಗ್ಗೆ ರುದ್ರಾಕ್ಷಿ ಮಂಟಪ ಉತ್ಸವ ನಡೆಯಲಿದ್ದು, ಆ ಬಳಿಕ ಪೂಜೆ ಕೊನೆಗೊಳ್ಳುತ್ತದೆ ಎಂದು ದೇವಸ್ಥಾನದ ಸ್ಥಾನಿಕ ವೆಂಕಟೇಶ್ ತಿಳಿಸಿದ್ದರು.

# ಸ್ವಚ್ಛತೆಗಾಗಿ ಸೈಕಲ್ ಜಾಥಾ

## 350ಕ್ಕೂ ಹೆಚ್ಚು ಜನರು ಭಾಗಿ



• **ಉದಯವಾಹಿನಿ, ಮೈಸೂರು**

ನಗರದ ಪ್ರಮುಖ ರಸ್ತೆಗಳಲ್ಲಿ ಸೈಕಲ್ ಸವಾರರು ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಿದರು. ಪರಿಸರ ಸಂರಕ್ಷಣೆಗಾಗಿ ಎಚ್ಚೆತ್ತುಕೊಳ್ಳುವಂತೆ ಮನವಿ ಮಾಡಿದರು.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದಿಂದ ಸ್ವಚ್ಛ ಸರ್ವೇಕ್ಷಣ್-2025 ಸ್ವಚ್ಛತೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ ಅಭಿಯಾನದ ಭಾಗವಾಗಿ ಸ್ವಚ್ಛತಾ ಸೈಕಲ್ ಜಾಥಾ ಆಯೋಜಿಸಲಾಗಿತ್ತು.

ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಜಾಥಾಗೆ ಚಾಲನೆ ನೀಡಿದರು.

ನಾಳಿನ ಉತ್ತಮ ಪರಿಸರಕ್ಕಾಗಿ ಇಂದೇ ಏರೋಣ ಸೈಕಲ್ ಸವಾರಿ ಎಂಬ ಘೋಷವಾಕ್ಯದೊಂದಿಗೆ 350ಕ್ಕೂ ಹೆಚ್ಚು ನಾಗರಿಕರು, ಕ್ರೀಡಾಪಟುಗಳು ಉತ್ಸಾಹದಿಂದ ಪಾಲ್ಗೊಂಡರು. ಸೈಕಲ್ ಜಾಥಾದಿಂದ ಸ್ವಚ್ಛತೆಯ ಕಾರ್ಯಕ್ರಮದಿಂದ ಸಾರ್ವಜಕರಿಗೆ ಅನುಕೂಲವಾಗಲಿದೆ.ರಾಯಲ್ ರೈಡರ್ಸ್ ಮೈಸೂರು, ಸೈಕ್ಲೋಪೀಡಿಯಾ, ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್, ಮೈಸೂರು ಅಥ್ಲೆಟ್ಸ್ ಕ್ಲಬ್, ಮೈಸೂರು ಸೈಕ್ಲಿಂಗ್ ತಂಡದ ಸದಸ್ಯರು, ಪ್ಯಾರಾಮೌಂಟ್, ಮೈ ಬೈಕ್, ಅರ್ನಾಲ್ಡ್ ಫಿಟ್ನೆಸ್ ಮತ್ತು ಕಾಂಗರೂ ಕೇರ್ ಸಂಸ್ಥೆಗಳ ಪ್ರತಿನಿಧಿಗಳು ಜಾಥಾಕ್ಕೆ ಸಹಕಾರ ನೀಡಿದರು. ಪಾಲಿಕೆಯ ಉಪ ಆಯುಕ್ತರಾದ ಮಂಜು ಸಿ.ಎಸ್ (ಅಭಿವೃದ್ಧಿ), ಸೋಮಶೇಖರ್ ಜಿ.ಎಸ್.(ಕಂದಾಯ), ಕಾರ್ಯಪಾಲಕ ಇಂಜಿನಿಯರ್ ದೀಪಕ್, ಆರೋಗ್ಯಾಧಿಕಾರಿ ಮೃತ್ಯುಂಜಯ ಕೆ.ಎಸ್. ವಲಯ ಆಯುಕ್ತರಾದ ಪ್ರತಿಭಾ, ರಮೇಶ್, ಮಂಜುನಾಥ್ ರೆಡ್ಡಿ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಚೇತನ ಮತ್ತು ಮಧುಕರ್ ಪಾಲ್ಗೊಂಡಿದ್ದರು.

**ಜಾಥಾ ಕೆ.ಆರ್ ವೃತ್ತ, ದೇವರಾಜು ಅರಸು ರಸ್ತೆ, ಬಾಬು ಜಗಜೀವನ್ ರಾಂ ವೃತ್ತ, ಆಯುರ್ವೇದಿಕ್ ವೃತ್ತ, ಹೈವೇ ವೃತ್ತ, ಎಲ್ ಐಸಿ ವೃತ್ತ ಮತ್ತು ಜೆಎಸ್‌ಎಸ್ ಮೆಡಿಕಲ್ ಕಾಲೇಜು ಹಾಗೂ ಸಯ್ಯಾಜಿ ರಾವ್ ರಸ್ತೆಯಲ್ಲಿ ಸಾಗಿ ದೇವಸ್ಥಾನ ಆವರಣದಲ್ಲಿ ಸಮಾರೋಪಗೊಂಡಿತು.**

# ನೊಳಂಬ ಲಿಂಗಾಯತರು ಕೃತಿ ಬಿಡುಗಡೆ



• **ಉದಯವಾಹಿನಿ, ತುಮಕೂರು**

ಅತ್ಯಂತ ವಾಸ್ತವದ ನೆಲೆಯಲ್ಲಿ ನೊಳಂಬ ಲಿಂಗಾಯತರು ಕೃತಿ ರಚಿಸಲಾದೆ. ಇದು ಸಮುದಾಯದ ಸಮಗ್ರ ಅಧ್ಯಯನವಾಗಿದೆ ಎಂದು ಶರಣತತ್ವ ಚಿಂತಕ ಬಸವರಾಜಪ್ಪ ವೆಂಕಟಾಪುರ ಅಭಿಪ್ರಾಯಪಟ್ಟರು. ನಗರದಲ್ಲಿ ಬಸವ ಕೇಂದ್ರ, ಜಯದೇವ ವಿದ್ಯಾರ್ಥಿ ನಿಲಯ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಶರಣ ಸಂಗಮ ಕಾರ್ಯಕ್ರಮದಲ್ಲಿ ಇತಿಹಾಸಕಾರ ಡಿ.ಎನ್.ಯೋಗೀಶ್ವರಪ್ಪ ರಚನೆಯ ನೊಳಂಬ ಲಿಂಗಾಯತರು ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಈ ಕೃತಿ ನೊಳಂಬ ಲಿಂಗಾಯತರ ಸಾಂಸ್ಕೃತಿಕ ಬದುಕಿನ ಸೂಕ್ಷ್ಮ ಆಯಾಮಗಳನ್ನು ಚರ್ಚಿಸುತ್ತದೆ ಎಂದರು.ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎಸ್.ಸಿದ್ದಲಿಂಗಪ್ಪ, ನೊಳಂಬ ಲಿಂಗಾಯತರು ಗುರು ಸಿದ್ಧರಾಮೇಶ್ವರರ ಆರಾಧಕರು. ಪ್ರತಿ ವರ್ಷ ಸಿದ್ದರಾಮೇಶ್ವರರ ಜಯಂತಿ ಆಚರಿಸುವ ಮೂಲಕ ಸಮಾಜವನ್ನು ಸಂಘಟಿಸಲಾಗುತ್ತಿದೆ. ನೊಳಂಬ ಲಿಂಗಾಯತ ಸಂಘ ಸ್ಥಾಪಿಸಿ ಜನಮುಖಿ, ಸಾಮಾಜಿಕ ಕಾರ್ಯ ಮಾಡಲಾಗುತ್ತಿದೆ ಎಂದು ತಿಳಿಸಿದರು. ಕೃತಿಕಾರ ಡಿ.ಎನ್.ಯೋಗೀಶ್ವರಪ್ಪ, ಲಿಂಗಾಯತರಲ್ಲಿ 98 ಒಳ ಪಂಗಡಗಳಿದ್ದು, ನೊಳಂಬ ಲಿಂಗಾಯತರು ಎಂಟು ಜಿಲ್ಲೆಗಳಲ್ಲಿ ಗಣನೀಯವಾಗಿ ನೆಲೆಸಿದ್ದಾರೆ.

ಇತ್ತೀಚೆಗಿನ ದಿನಗಳಲ್ಲಿ ಸಮುದಾಯದ ಸಂಸ್ಕೃತಿ ಅಳಿಸಿ ಹೋಗುತ್ತಿದೆ. ಹೆಚ್ಚಿನ ಅಧ್ಯಯನದಿಂದ ಜ್ಞಾನ ವೃದ್ಧಿಗೆ ಅನುಕೂಲವಾಗುತ್ತೆ. ಈ ಕೃತಿ ಓದುಗರಿಗೆ ಕೈ ಗನ್ನಡಿಯಾಗಿದೆ.

ಆಸಂಸ್ಕೃತಿ ದಾಖಲಿಸುವ ಉದ್ದೇಶದಿಂದ ಕೃತಿ ರಚಿಸಲಾಗಿದೆ ಎಂದು ಹೇಳಿದರು.ಲೇಖಕಿ ಸುಶೀಲಾ ಸದಾಶಿವಯ್ಯ, ಪ್ರಾಧ್ಯಾಪಕ ಎಂ.ಗೋವಿಂದರಾಯ ಮಾತನಾಡಿದರು.


ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಬಿ.ನಾಗಭೂಷಣ್, ಹರಿಕಥಾ ವಿದ್ವಾನ್ ಲಕ್ಷ್ಮಣದಾಸ್, ಪ್ರಕಾಶಕ ಸತೀಶ್ ಹೆಬ್ಬಾಕ, ಬಸವ ಕೇಂದ್ರದ ಅಧ್ಯಕ್ಷೆ ಸಿದ್ದಗಂಗಮ್ಮ ಬಿ.ಸಿದ್ದರಾಮಣ್ಣ, ಪದಾಧಿಕಾರಿಗಳಾದ ಚಂದ್ರಶೇಖರ್, ಕಲ್ಪನಾ ಉಮೇಶ್ ಇತರರು ಹಾಜರಿದ್ದರು.

# ರಾಸಾಯನಿಕವಿದ್ದ ಟ್ಯಾಂಕ್ ಸ್ಫೋಟಗೊಂಡು ಇಬ್ಬರು ಸಾವು

• **ಉದಯವಾಹಿನಿ, ಮಂಡ್ಯ**

ರಾಸಾಯನಿಕವಿದ್ದ ಬೃಹತ್‌ಟ್ಯಾಂಕ್ ಸ್ಫೋಟಗೊಂಡು ಘಟನೆಯಲ್ಲಿ ಇಬ್ಬರು ಸಾವನ್ನಪ್ಪಿ, ಮೂವರಿಗೆ ಗಂಭೀರ ಗಾಯವಾಗಿರುವ ಘಟನೆ ಜಿಲ್ಲೆಯಲ್ಲಿ ನಡೆದಿದೆ. ಮಂಡ್ಯ ತಾಲ್ಲೂಕಿನ ಬಸರಾಳು ಬಳಿಯ ಕಾರೇಕಟ್ಟೆ ಗ್ರಾಮದ ಬಳಿಯ ಕೀರ್ತಿ ಕೆಮಿಕಲ್ಸ್ ಇಂಡಸ್ಟ್ರೀಸ್‌ನಲ್ಲಿ ಈ ದುರ್ಘಟನೆ ನಡೆದಿದ್ದು, ಬಿಹಾರ ಮೂಲದ ಇಬ್ಬರು ಕಾರ್ಮಿಕರು ಸಾವನ್ನಪ್ಪಿದ್ದಾರೆ. ಮೃತರ ದೇಹಗಳು ಛಿದ್ರ, ಛಿದ್ರವಾಗಿವೆ. ಮೂವರಿಗೆ ಗಂಭೀರ ಗಾಯವಾಗಿದ್ದು, ಓರ್ವನ ಕೈ ಕಟ್ ಆಗಿದೆ.ಗಾಯಾಳುಗಳನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಮೃತರ ಮತ್ತು ಗಾಯಾಳುಗಳ ವಿವರ ಬಂದಿಲ್ಲ. ದುರ್ಘಟನೆ ಬಳಿಕ ಕಾರ್ಖಾನೆಯವರು ಸ್ಥಳದಿಂದ ನಾಪತ್ತೆಯಾಗಿದ್ದಾರೆ. ಬಸರಾಳು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತರ ಮತ್ತು ಗಾಯಾಳುಗಳ ಬಗ್ಗೆ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ. ಘಟನೆ ಬಗ್ಗೆ ಸ್ಥಳೀಯರಾದ ಜಿ. ಪ್ರಕಾಶ್ ಅವರು ಮಾತನಾಡಿ, 4 ವರ್ಷದ ಹಿಂದೆ ಇದೇ ಕಾರ್ಖಾನೆಯಿಂದ ರಾಸಾಯನಿಕ ಲೀಕ್ ಆಗಿ ಅಪಾರ ಪ್ರಮಾಣದಲ್ಲಿ ರೈತರ



ಬೆಳೆ ನಾಶವಾಗಿತ್ತು. ಇದೇ ಕಾರಣಕ್ಕೆ ರೈತರೆಲ್ಲರೂ ಪ್ರತಿಭಟನೆ ನಡೆಸಿ ಕಾರ್ಖಾನೆಯನ್ನು ಬಂದ್ ಮಾಡಿಸಿದ್ದೆವು. ಅದಾಗಿ ಕಳೆದ ಒಂದು ತಿಂಗಳಿಂದ ಕಾರ್ಖಾನೆಯನ್ನು ತೆರವುಗೊಳಿಸುತ್ತಿದ್ದಾರೆ. 8.30 ಯಿಂದ 8.45 ಒಳಗೆ ಸ್ಫೋಟದ ಶಬ್ಧ ಬಂತು. ಅದನ್ನು ವಿಚಾರಿಸಿದಾಗ ಇಲ್ಲಿ ಅನಾಹುತವಾಗಿರುವುದು ಗೊತ್ತಾಯಿತು. ಸ್ಥಳಕ್ಕೆ ಬಂದಾಗ ಇಲ್ಲಿ ಎರಡು ಮೃತದೇಹಗಳು ಕಂಡು ಬಂದವು. ಬೇರೆ ಜನ ಯಾರು ಇಲ್ಲಿ ಇರಲಿಲ್ಲ.

ಗಾಯಗೊಂಡವರನ್ನು ಆಂಬ್ಯುಲೆನ್ಸ್ ಅಲ್ಲಿ ಕರೆದುಕೊಂಡು ಹೋಗಲಾಗಿದೆ. ಪೊಲೀಸರು ಬಂದು ತನಿಖೆ ನಡೆಸುತ್ತಿದ್ದಾರೆ ಎಂದು ತಿಳಿಸಿದರು.ಟ್ರಾಕ್ಟರ್ ಹಾಗೂ ಲಾರಿ ನಡುವೆ ಭೀಕರ ಅಪಘಾತ ಸಂಭವಿಸಿ ಇಬ್ಬರು ಸಾವನ್ನಪ್ಪಿರುವ ಘಟನೆ ಚಿಕ್ಕಮಗಳೂರಿನ ಅಜ್ಜಂಪುರ ತಾಲ್ಲೂಕಿನ ಬಗ್ಗುವಳ್ಳಿ ಗೇಟ್ ಬಳಿ ಸಂಭವಿಸಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಮಾಳಿಗೆಹಟ್ಟಿ ಗ್ರಾಮದ ನಿವಾಸಿಗಳು ಮೂರು ಟ್ರಾಕ್ಟರ್‌ನಲ್ಲಿ ಕಲ್ಲತ್ತಿಗಿರಿ ದೇವಸ್ಥಾನಕ್ಕೆ ಆಗಮಿಸಿದ್ದರು.

ದೇವಾಲಯದ ಪೂಜೆ ಮುಗಿಸಿ ವಾಪಸ್ ಮನೆಗೆ ತೆರಳುವಾಗ ದುರಂತ ಸಂಭವಿಸಿ ಟ್ರ್ಯಾಕ್ಟರ್‌ನಲ್ಲಿದ್ದ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ 13 ಜನರಿಗೆ ಗಂಭೀರ ಗಾಯವಾಗಿದ್ದು, ಶಿವಮೊಗ್ಗ ಜಿಲ್ಲಾಸ್ಪತ್ರೆ ಮೆಗ್ಗಾನ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

# ಮಾಗಡಿ ಅಭಿವೃದ್ಧಿಗೆ ಒತ್ತು: ಶಾಸಕ ಎಚ್.ಸಿ.ಬಾಲಕೃಷ್ಣ

• **ಉದಯವಾಹಿನಿ, ಮಾಗಡಿ**

ಇನ್ನೊಂದು ವರ್ಷ ಕಾಲಾವಕಾಶ ನೀಡಿದರೆ ಪಟ್ಟಣದ ಸಂಪೂರ್ಣ ಅಭಿವೃದ್ಧಿಪಡಿಸುವುದಾಗಿ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು. ಪಟ್ಟಣದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 4ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಕಾಮಗಾರಿ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಗೌರಮ್ಮನಕೆರೆ ಕಾಮಗಾರಿಗೂ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಫೆಬ್ರವರಿ ತಿಂಗಳಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದರು.

ಅಲ್ಪಸಂಖ್ಯಾತರ ವಾರ್ಡ್‌ಗಳಿಗೆ ಸಚಿವ ಜಮೀರ್ ಅಹಮ್ಮದ್ ಖಾನ್ ಅನುದಾನ ಒದಗಿಸಿದ್ದಾರೆ. ಪಟ್ಟಣದ ಹೊಂಬಾಳಮ್ಮನ ಕೆರೆ ಮುಂಭಾಗದ ಕೋಟೆ ಕಂದಕ ಜಾಗದಲ್ಲಿ ಕೆ-ಶಿಫ್ ವತಿಯಿಂದ ರಸ್ತೆ ಕಾಮಗಾರಿ ಮಾಡಲಾಗುತ್ತಿದೆ. ಕಂದಕವನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದು ಎಂದು ಅಧಿಕಾರಿಗಳಿಗೆ



ಸೂಚನೆ ನೀಡಿದರು.

ಬಸ್ ದರ ಏರಿಕೆ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಗೆ ಇಲ್ಲ ಎಂದು ಬಾಲಕೃಷ್ಣ ತಿರುಗೇಟು ನೀಡಿದರು. ಕೇಂದ್ರ ಸರ್ಕಾರ ಈಗಾಗಲೇ ಜನಸಾಮಾನ್ಯರಿಗೆ ಹೆಚ್ಚುವರಿ ತೆರಿಗೆ ಹಾಕಿ ಸಾಕಷ್ಟು ತೊಂದರೆ ನೀಡಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಿದ ಪರಿಣಾಮ ಸಾರಿಗೆ ಇಲಾಖೆ ಬೆಲೆ ಏರಿಸಿದೆ ಎಂದು ಸಮರ್ಥಿಸಿಕೊಂಡರು. ಪುರಸಭೆ ಅಧ್ಯಕ್ಷೆ ರಮ್ಯಾ ನರಸಿಂಹಮೂರ್ತಿ, ಉಪಾಧ್ಯಕ್ಷ ರಿಯಾಜ್, ಸ್ಥಾಯಿ ಸಮಿತಿ ಅಧ್ಯಕ್ಷ ಶಿವಕುಮಾರ್, ಸದಸ್ಯರಾದ ಕೆ.ವಿ.ಬಾಲು, ರಹಮತ್, ಶಬೀರ್, ಮಮತಾ ಗುರುಸ್ವಾಮಿ, ಹೇಮಲತಾ, ಭಾಗ್ಯಮ್ಮ, ಅನಿಲ್ ಕುಮಾರ್, ಕಾಂತರಾಜು ಪುರಸಭೆ ಮುಖ್ಯಾಧಿಕಾರಿ ಶಿವರುದ್ರಯ್ಯ, ಮುಖಂಡರಾದ ಅಬೀದ್, ಪರ್ವೀಸ್ ಇತರರು ಭಾಗವಹಿಸಿದ್ದರು.

# ನಾಡಿಗೆ ಕೆಂಗಲ್ ಹನುಮಂತಯ್ಯ ಕೊಡುಗೆ ಅನನ್ಯ: ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ

• **ಉದಯವಾಹಿನಿ ,ರಾಮನಗರ**


ಮಾಜಿ ಮುಖ್ಯಮಂತ್ರಿ ಹಾಗೂ ವಿಧಾನಸೌಧದ ನಿರ್ಮಾತೃವಾದ ಜಿಲ್ಲೆಯ ಹೆಮ್ಮೆಯ ರಾಜಕಾರಣಿ ಕೆಂಗಲ್ ಹನುಮಂತಯ್ಯ ಅವರ ಜನ್ಮದಿನವನ್ನು ನಗರಸಭೆ, ಕೆಂಗಲ್ ಹನುಮಂತಯ್ಯ ಸಾಮಾಜಿಕ ಮತ್ತು ಸಾಂಸ್ಕತಿಕ ಟ್ರಸ್ಟ್ ಹಾಗೂ ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಆಚರಿಸಲಾಯಿತು.

ನಗರದ ಹಳೆ ಬಸ್ ನಿಲ್ದಾಣದ ಬಳಿ ಇರುವ ಹನುಮಂತಯ್ಯ ಅವರ ಪ್ರತಿಮೆಗೆ ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಶಶಿ, ಟ್ರಸ್ಟ್ ಕಾರ್ಯದರ್ಶಿ ಚೂಡಲಿಂಗೇಶ್ವರಯ್ಯ ಸೇರಿದಂತೆ ಹಲವು ಗಣ್ಯರು ಮಾಲಾರ್ಪಣೆ ಮಾಡಿದರು. ಜಿಲ್ಲೆಯ ರಾಜಕಾರಣಿಯ ಕೊಡುಗೆಯನ್ನು ಸ್ಮರಿಸಿದರು. ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಈ ವೇಳೆ ಮಾತನಾಡಿದ ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ಸ್ವಾಭಿಮಾನದ ರಾಜಕಾರಣಕ್ಕೆ



ಹೆಸರಾಗಿದ್ದ ಕೆಂಗಲ್ ಹನುಮಂತಯ್ಯ ಅವರು ನಾಡಿನ ಆಡಳಿತ ಸೌಧವಾದ ವಿಧಾನಸೌಧ ನಿರ್ಮಾಣ ಸೇರಿದಂತೆ ಹಲವು ಕೊಡುಗೆಗಳನ್ನು ನೀಡಿದ್ದಾರೆ. ರಾಮನಗರವನ್ನು ಪ್ರತಿನಿಧಿಸುತ್ತಿದ್ದ ಅವರು ರಾಜ್ಯದ ಮೊದಲ ಚುನಾಯಿತಿ ಮುಖ್ಯಮಂತ್ರಿಯಾಗಿ ನಾಡಿನ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದರು' ಎಂದರು. ಸಂಸತ್ ಗೆ ಆಯ್ಕೆಯಾಗುವ ಮೂಲಕ ರಾಷ್ಟ್ರ ರಾಜಕಾರಣ ಪ್ರವೇಶಿಸಿದ ಹನುಮಂತಯ್ಯ ಅವರು ಕೇಂದ್ರ ರೈಲ್ವೆ ಸಚಿವರಾಗಿ ಹಲವು ಕೆಲಸಗಳನ್ನು ಮಾಡಿದರು. ನಮ್ಮ ಜಿಲ್ಲೆಯು ಕಂಡಿರುವ ಇಂತಹ ಮಹಾನ್ ನಾಯಕನ ಕೊಡುಗೆಯನ್ನು ನಾವೆಲ್ಲರೂ ಸ್ಮರಿಸಬೇಕಿದೆ. ಮಾದರಿ ರಾಜಕಾರಣಿಯ ಆದರ್ಶವನ್ನು ಎಲ್ಲರೂ ಅಳವಡಿಸಿಕೊಳ್ಳಬೇಕಿದೆ ಎಂದರು. ಟ್ರಸ್ಟ್ ಕಾರ್ಯದರ್ಶಿ ಚೂಡಲಿಂಗೇಶ್ವರಯ್ಯ ಮಾತನಾಡಿ, ನಗರದ ಹಳೆ ಬಸ್ ನಿಲ್ದಾಣದಲ್ಲಿರುವ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆಯು ನಮ್ಮ ನೆಲದ ಹೆಮ್ಮೆಯ ರಾಜಕಾರಣಿಯನ್ನು ಸದಾ ಸ್ಮರಿಸುವಂತೆ ಮಾಡಿದೆ. ಕೆಂಗಲ ಅವರ ನೆನಪಿನಾರ್ಥವಾಗಿ ಟ್ರಸ್ಟ್ ವತಿಯಿಂದ ಪ್ರತಿ ವರ್ಷ ಜನ್ಮದಿನ ಆಚರಿಸಲಾಗುತ್ತಿದೆ' ಎಂದು ತಿಳಿಸಿದರು.

ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ, ಟ್ರಸ್ಟ್ ಉಪಾಧ್ಯಕ್ಷ ಚನ್ನಮಾನಹಳ್ಳಿ ಅಪ್ಪಾಜಣ್ಣ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವೈ.ಹೆಚ್. ಮಂಜು, ಭಾರತಿ ಕೋಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ. ಚಂದ್ರಯ್ಯ, ಟಿಎಪಿಸಿಎಂಎಸ್ ಅಧ್ಯಕ್ಷ ದೊಡ್ಡಿ ಸುರೇಶ್, ಬಿಡದಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗಂಗಾಧರ ಗೌಡ, ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮೇಲಿಂಗು, ಜಿ.ಪಂ. ಮಾಜಿ ಸದಸ್ಯ ಕೆ. ರಮೇಶ್, ನಗರಸಭೆ ಸದಸ್ಯರಾದ ಮಂಜುನಾಥ್, ಪಾರ್ವತಮ್ಮ, ವಿಜಯಕುಮಾರಿ, ಮಂಜುಳಾ, ಮಹಾಲಕ್ಷ್ಮಿ, ಪವಿತ್ರ, ಸೋಮಶೇಖರ್, ಮುತ್ತುರಾಜು, ಗ್ಯಾಬ್ರಿಯಲ್, ನಾಗಮ್ಮ, ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಶಿವಕುಮಾರಸ್ವಾಮಿ ಇತರರು ಇದ್ದರು.



# ಮಹಾನಗರ ಪಾಲಿಕೆ ಅಧಿಕಾರಿಗಳ ವಿರುದ್ಧ ಪರಮೇಶ್ವರ ಕಿಡಿ

## ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚಿಸಿದರು

• **ಉದಯವಾಹಿನಿ ,ತುಮಕೂರು**

ನಗರದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಮಹಾನಗರ ಪಾಲಿಕೆ ಆಯುಕ್ತರು ಸೇರಿದಂತೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಮುನ್ನೆಚ್ಚರಿಕೆ ವಹಿಸದೇ ಇರುವುದರಿಂದ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ಸ್ಥಿತಿ ಬಂದಿದೆ ಎಂದು ಕಿಡಿಕಾರಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚಿಸಿದರು.

ನಗರ ಪ್ರದೇಶಗಳಲ್ಲಿ ಈಗಾಗಲೇ ಟ್ಯಾಂಕರ್ ನೀರು ಸರಬರಾಜು ಮಾಡುತ್ತಿರುವುದು ಸರಿಯಲ್ಲ. ಈವರೆಗೆ ನೀರು ಸಂಗ್ರಹಕ್ಕೆ ನಗರಾಡಳಿತದಿಂದ ಯಾವ ಕ್ರಮ



ತೆಗೆದುಕೊಳ್ಳಲಾಗಿದೆ ಎಂದು ಪ್ರಶ್ನಿಸಿದರು. ನೀರು ಸಂಗ್ರಹಕ್ಕೆ ಯಾವುದೇ ಮುನ್ನೆಚ್ಚರಿಕೆ ವಹಿಸದಿರುವುದು ಈಗ ಸಂಕಷ್ಟ ತಂದೊಡ್ಡಿದೆ. ಬೇಸಿಗೆ ಬಂದ ಕೂಡಲೆ ಟ್ಯಾಂಕರ್‌ನಲ್ಲಿ ನೀರು ಸರಬರಾಜು ಎಂಬ ಉತ್ತರ ಬರುವುದು ಸರಿಯಲ್ಲ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.ಅಧಿಕಾರಿಗಳ ನಿಧಾನ ಧೋರಣೆಯಿಂದ ನೀರು ಸಂಗ್ರಹಕ್ಕೆ ಸಂಬಂಧಿಸಿದ ಕಾಮಗಾರಿಗಳು ವಿಳಂಬವಾಗಿವೆ. ಸಾರ್ವಜನಿಕರಿಂದ ಸಮಸ್ಯೆ ಹಾಗೂ ದೂರುಗಳು ಬಂದರೆ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಸಿದರು.

ಮುಂದಿನ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು.

ಬೇಸಿಗೆ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬ, ಜಾತ್ರೆ ಆಚರಿಸಲಾಗುತ್ತದೆ. ಯಾವುದೇ ಜಾತ್ರೆ, ಹಬ್ಬ ಆಚರಿಸಲು ಸ್ಥಳೀಯ ಆಡಳಿತದಿಂದ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕು.

ಅನುಮತಿ ಇಲ್ಲದೆ ನಡೆದ ಜಾತ್ರೆಯಲ್ಲಿ ಏನಾದರೂ ಸಮಸ್ಯೆಗಳಾದರೆ ಸಂಬಂಧಿಸಿದ ಅಧಿಕಾರಿಗಳನ್ನೇ ಹೊಣೆ ಮಾಡುವುದಾಗಿ ಎಚ್ಚರಿಸಿದರು.


# ಗ್ರಾಮಸ್ಥರಿಂದ ಬಾವಿಗೆ ಬಿದ್ದ ಚಿರತೆ ರಕ್ಷಣೆ

• **ಉದಯವಾಹಿನಿ, ತಿಪಟೂರು**

ನಗರದ ಗಾಂಧಿನಗರ ಪಕ್ಕದಲ್ಲಿರುವ ಮಾರನಗೆರೆಯಲ್ಲಿ ತೋಟದ ಬಾವಿಗೆ ಬಿದ್ದಿದ್ದ ಚಿರತೆಯನ್ನು ಅರಣ್ಯ ಇಲಾಖೆ ಮತ್ತು ಗ್ರಾಮಸ್ಥರ ಜಂಟಿ ಕಾರ್ಯಾಚರಣೆಯಿಂದ ರಕ್ಷಿಸಲಾಗಿದೆ. ಬಾವಿಯಲ್ಲಿ ಚಿರತೆಯನ್ನು ಕಂಡು ಗ್ರಾಮಸ್ಥರು ಆತಂಕಕ್ಕೀಡಾದ್ದರು. ಈ ಕುರಿತು ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಆದರೆ, ಮಧ್ಯಾಹ್ನದವರೆಗೆ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಬಾರದೆ ಇರುವುದರಿಂದ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದರು.

ಮಧ್ಯಾಹ್ನದ ಬಳಿಕ ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಗ್ರಾಮಸ್ಥರ ಸಹಕಾರದೊಂದಿಗೆ ಬಾವಿಯೊಳಗೆ ಇದ ಚಿರತೆಯನ್ನು ಮೇಲೆತ್ತುವಲ್ಲಿ ಯಶಸ್ವಿಯಾಗಿದ್ದಾರೆ. ಚಿರತೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಬಳಿಕ ಅರಣ್ಯ ಪ್ರದೇಶಕ್ಕೆ ಬಿಡಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.


ಶ್ರೀನಿವಾಸಪುರ ತಾಲ್ಲೂಕು ಅಂತರ್ಜಲ ಅತಿಯಾದ ಬಳಕೆಯ ಪಟ್ಟಿಯಲ್ಲಿರುವುದರಿಂದ ಅಲ್ಲಿ ಹೊಸ ಕೊಳವೆ



ಬಾವಿಗಳಿಗೆ ಅನುಮತಿ ನೀಡುತ್ತಿಲ್ಲ. ಸರ್ಕಾರದ ಗಂಗಾ ಕಲ್ಯಾಣಯೋಜನೆಗೆ ಮಾತ್ರ ವಿನಾಯಿತಿ ನೀಡಲಾಗಿದೆ. ರೀ-ಡ್ರಿಲ್ಲಿಂಗ್ ಕಾಮಗಾರಿಗಳಲ್ಲಿ ಕಂಡುಬಂದಿರುವ ತಾಂತ್ರಿಕ ಲೋಪಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ಆದೇಶಿಸಿದರು.

# ಮಿನಿ ನ್ಯೂಸ್

## ಚೂಡಾರತ್ನಮ್ಮನವರ ಗಟ್ಟಿತನ ಯುವಕರಿಗೆ ಮಾದರಿಯಾಗಲಿ



• **ಉದಯವಾಹಿನಿ, ಮೈಸೂರು**

ಬ್ರಹ್ಮೋತ್ಥಾನ ಸೇವಾ ಪರಿಷತ್(ರಿ) ಮೈಸೂರು, ಕೃಷ್ಣಮೂರ್ತಿಪುರಂನ ರಾಮಮಂದಿರದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಆಯೋಜಿಸಿದ್ದ ರುದ್ರ ಹೋಮ, ರುದ್ರ ಪಾರಾಯಣ ಮತ್ತು ಮಹಾ ಮೃತ್ಯುಂಜಯ ಹೋಮ ಕಾರ್ಯಕ್ರಮದಲ್ಲಿ ತಲಕಾಡಿನ ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನದ ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳು ಕಲಿಯುಗದ ಶ್ರವಣಕುಮಾರ ಕೃಷ್ಣಕುಮಾರ್ ಹಾಗೂ 76ನೇ ವಸಂತಕ್ಕೆ ಪಾದಾರ್ಪಣೆ ಮಾಡಿದ ಮಾತೃಶ್ರೀ ಚೂಡಾರತ್ನಮ್ಮನವರನ್ನು ಗೌರವಿಸಿ ಅನುಗ್ರಹ ಫಲಮಂತ್ರಾಕ್ಷತೆ ನೀಡಿದರು.

## ಜಲಾಶಯದಲ್ಲಿ ಹುಲಿ ಮೃತದೇಹ ಪತ್ತೆ

• **ಉದಯವಾಹಿನಿ, ಚಾಮರಾಜನಗರ**

ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಗುಂಡಾಲ್ ಜಲಾಶಯದಲ್ಲಿ ಭಾನುವಾರ ಹುಲಿಯೊಂದರ ಮೃತದೇಹ ಸಿಕ್ಕಿದೆ. ಇದು ಗಂಡು ಹುಲಿಯಾಗಿದ್ದು, 5ರಿಂದ 6 ವರ್ಷ ಪ್ರಾಯ ಆಗಿರಬಹುದು ಎಂದು ಅಂದಾಜಿಸಲಾಗಿದೆ. ಉರುಳಿಗೆ ಸಿಲುಕಿ ಸಾವನ್ನಪ್ಪಿರುವ ಕುರಿತು ಅರಣ್ಯ ಇಲಾಖೆ ಶಂಕೆ ವ್ಯಕ್ತಪಡಿಸಿದೆ.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಅಧಿಕಾರಿಗಳು ಪ್ರಕಟಣೆ ಮೂಲಕ ಮಾಹಿತಿ ಹಂಚಿಕೊಂಡಿದ್ದು, ಕೊಳ್ಳೇಗಾಲ ವನ್ಯಜೀವಿ ವಲಯದ ಗುಂಡಾಲ್ ಶಾಖೆಯಲ್ಲಿ ಸಿಬ್ಬಂದಿ ಗಸ್ತಿನಲ್ಲಿರುವಾಗ ಹುಲಿ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ ಎಂದು ತಿಳಿಸಿದೆ. ಮೇಲ್ನೋಟಕ್ಕೆ ಉರುಳಿಗೆ ಸಿಲುಕಿ ಗುಂಡಾಲ್ ಡ್ಯಾಮ್ ಹತ್ತಿರ ಬಂದು ನೀರಿನ ದಡದಲ್ಲಿ ಮೃತಪಟ್ಟಿರುವ ಸಾಧ್ಯತೆ ಇದೆ.

ಪಶು ವೈದ್ಯಾಧಿಕಾರಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಕಳೇಬರವನ್ನು ಸುಡಲಾಗುವುದುಪ್ರದೇಶದಲ್ಲಿ ಅರಣ್ಯ ಇಲಾಖೆ ಹಾಗೂ ಹುಲಿ ಗಣತಿ ಸಿಬ್ಬಂದಿ ಗಸ್ತು ತಿರುಗುತ್ತಿದ್ದಾಗ ಗಂಗೆಗಿರಿ ಮೀಸಲು ಅರಣ್ಯ ಪ್ರದೇಶ, ಶಿರಗೋಳ ಗ್ರಾಮದ ಭಾಗದಲ್ಲಿ ಕಳೆದ ತಿಂಗಳು ಭಾರೀ ಗಾತ್ರದ ಹುಲಿ ಕಳೇಬರ ಪತ್ತೆಯಾಗಿತ್ತು.

## ವಿವಿಧ ಕಾಮಗಾರಿಗೆ ಭೂಮಿಪೂಜೆ

• **ಉದಯವಾಹಿನಿ, ಗೌರಿಬಿದನೂರು**

ತಾಲ್ಲೂಕಿನ ವಿವಿಧ ಕಾಮಗಾರಿಗೆ ಶಾಸಕ ಕೆ.ಎಚ್ ಪುಟ್ಟಸ್ವಾಮಿ ಶನಿವಾರ ಭೂಮಿಪೂಜೆ ನೆರವೇರಿಸಿದರು. ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ 7.85 ಕೋಟಿ ವೆಚ್ಚದಲ್ಲಿ ನಗರಗೆರೆ ಹೋಬಳಿಯ ಕೃಷ್ಣರಾಜಪುರ ತಾಂಡ, ನಂಜಯ್ಯಗಾರ್ಲಹಳ್ಳಿ, ದೇವಗಾನಹಳ್ಳಿ ಹಾಗೂ ಕಸಬಾ ಹೋಬಳಿಯ ಚಿಕ್ಕಕುರುಗೋಡು, ತೊಂಡೇಬಾವಿ ಹೋಬಳಿಯ ದ್ಯಾವಸಂದ್ರ ಗ್ರಾಮಗಳಲ್ಲಿ ಸಣ್ಣ ನೀರಾವರಿ ಅಡಿಯಲ್ಲಿ ಬರುವ ಹಳ್ಳ, ಕಾಲುವೆ, ಚೆಕ್ ಡ್ಯಾಂ ನಿರ್ಮಾಣ ಮತ್ತು ಕಾಲುವೆಗಳ ಆಧುನೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಯಿಂದ ಜನರಿಗೆ ಹೆಚ್ಚಿನ ಅನುಕೂಲವಾಗುತ್ತದೆ.

ಅಂತರ್ಜಲ ಮಟ್ಟ ಏರಿಕೆಯಾಗಿ ರೈತರ ನೂರಾರು ಜಮೀನುಗಳಿಗೆ ನೀರು ಹರಿಯುವುದರಿಂದ ವ್ಯವಸಾಯಕ್ಕೆ ಅನುಕೂಲ. ಸುತ್ತಮುತ್ತಲಿನ ಗ್ರಾಮಗಳ ಅಂತರ್ಜಲ ಮಟ್ಟ ವೃದ್ಧಿಯಾಗುತ್ತದೆ ಎಂದು ತಿಳಿಸಿದರು.

## ಗ್ರಾ. ಪಂ. ಸೇರ್ಪಡೆ: ಸಚಿವ ಎನ್. ಚಲುವರಾಯಸ್ವಾಮಿ ಸಭೆ

• **ಉದಯವಾಹಿನಿ,ಮದ್ದೂರು**

ಮದ್ದೂರು ನಗರಸಭೆಗೆ ನಾಲ್ಕು ಗ್ರಾಮ ಪಂಚಾಯಿತಿಗಳ ಸೇರ್ಪಡೆ ವಿಚಾರವನ್ನು ಮುಖ್ಯಮಂತ್ರಿಗಳು ಸೇರಿದಂತೆ ಸಂಬಂಧಪಟ್ಟ ಸಚಿವರು ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಹಾಗೂ ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ತಿಳಿಸಿದರು.

ತಾಲ್ಲೂಕಿನ ಗೆಜ್ಜಲಗೆರೆ ಗ್ರಾ.ಪಂ.,ಗೊರವನಹಳ್ಳಿ ಗ್ರಾ.ಪಂ. ಮುಂದೆ ಅನಿರ್ದಿಷ್ಟಾವಧಿ ಧರಣಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಹಾಗೂ ಮುಖಂಡರೊಂದಿಗೆ ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯ ನಂತರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ತಾಲ್ಲೂಕಿನ ನಾಲ್ಕು ಗ್ರಾ.ಪಂ.ಗಳಾದ ಗೆಜ್ಜಲಗೆರೆ, ಗೊರವನಹಳ್ಳಿ, ಚಾಮನಹಳ್ಳಿ , ಸೋಮನಹಳ್ಳಿಯನ್ನು ನಗರಸಭೆಗೆ ಸೇರಿಸಿಕೊಂಡಿರುವ ಬಗ್ಗೆ ಹಲವು ದಿನಗಳಿಂದ ಪ್ರತಿಭಟನೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಸಭೆಯನ್ನು ಕರೆಯಲಾಗಿತ್ತು.

ಗ್ರಾಮಸ್ಥರ ಅಹವಾಲುಗಳನ್ನು ಆಲಿಸಿದ ನಂತರ ಪ್ರತಿಭಟನೆ ನಿಲ್ಲಿಸಲು ಜಿಲ್ಲಾಡಳಿತ ,ನಾವು ಮನವಿ ಮಾಡಿದೇವು. ಪ್ರತಿಭಟನೆ ನಿಲ್ಲಿಸಲು ಮುಖಂಡರು ಒಪ್ಪಲಿಲ್ಲ ಎಂದರು.

ಅಂತರಾಳದಿಂದ..
EDITORIAL

# ಸಂಸತ್ ಕಲಾಪದ ಮಹತ್ವ-ಘನತೆ ಸಂರಕ್ಷಿಸಲು ಸಭಾಧ್ಯಕ್ಷಪೀಠ ವಿಫಲ



ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಪ್ರತಿ ಪಕ್ಷಗಳು ಮಂಡಿಸಿರುವ ಅವಿಶ್ವಾಸ ಗೊತ್ತುವಳಿಯು ಸಂಖ್ಯಾಬಲದ ಕೊರತೆಯಿಂದಾಗಿ ಬಿದ್ದುಹೋಗುವುದು ಖಚಿತ. ಆದರೆ, ಆ ನಿರೀಕ್ಷಿತ ಫಲಿತಾಂಶವು ಅವಿಶ್ವಾಸ ನಿರ್ಣಯಕ್ಕೆ ಕಾರಣವಾಗಿರುವ ಮುಖ್ಯ ವಿಷಯದ ಮಹತ್ವ ಕಡಿಮೆ ಆಗಲು ಕಾರಣವಾಗಬಾರದು. ಸ್ಪೀಕರ್ ಅವರ ನಡವಳಿಕೆಯು ಸಭಾಧ್ಯಕ್ಷರು ಎತ್ತಿಹಿಡಿಯಬೇಕಾದ ಅತ್ಯುತ್ತಮ ಮಾನದಂಡಗಳಿಗೆ ಅನುಗುಣವಾಗಿಲ್ಲ. ಹಿಂದಿನ ಕೆಲವು ಸ್ಪೀಕರ್‌ಗಳು ರೂಪಿಸಿಕೊಟ್ಟ ಅನುಸರಣೀಯ ಪೂರ್ವ ನಿದರ್ಶನಗಳ ಮಾದರಿಗೆ ಅನುಗುಣವಾಗಿಯೂ ಇಲ್ಲ.

ಕೊನೆಗೊಂಡ ಬಜೆಟ್ ಅಧಿವೇಶನದ ಮೊದಲ ಹಂತದ ಕಲಾಪದಲ್ಲಿನ ಸ್ಪೀಕರ್ ಅವರ ನಡವಳಿಕೆಯು ಅವಿಶ್ವಾಸ ನಿರ್ಣಯಕ್ಕೆ ತಕ್ಷಣದ ಪ್ರಚೋದನೆ ಒದಗಿಸಿದ್ದರೂ, ಈ ಹಿಂದೆಯೂ ಓಂ ಬಿರ್ಲಾ ಅವರು ಸದನವನ್ನು ನಿರ್ವಹಿಸಿರುವ ರೀತಿಯ ಬಗ್ಗೆ ಪ್ರತಿಪಕ್ಷಗಳು ಆತಂಕ, ಅಸಮಾಧಾನ ವ್ಯಕ್ತಪಡಿಸಿವೆ.

ಕಲಾಪಗಳು ನ್ಯಾಯಯುತವಾಗಿ ಹಾಗೂ ಸಂಸದೀಯ ಪ್ರಜಾಪ್ರಭುತ್ವ ಮಾದರಿಯ ಅತ್ಯುತ್ತಮ ಸಂಪ್ರದಾಯವನ್ನು ಅನುಸರಿಸುವಂತೆ ನೋಡಿಕೊಳ್ಳುವುದು ಸಭಾಧ್ಯಕ್ಷರ ಹೊಣೆಗಾರಿಕೆಯಾಗಿದೆ. ಆದರೆ, ಈ ಬಗ್ಗೆ ಬಿರ್ಲಾ ಅವರಿಗೆ ಯಾವುದೇ ಸ್ಪಷ್ಟತೆ ಇರುವಂತೆ ಕಾಣಿಸುತ್ತಿಲ್ಲ. ಸದನವನ್ನು ಅವರು ನಿರ್ವಹಿಸುತ್ತಿರುವ ರೀತಿಯ ಬಗ್ಗೆ ಪ್ರತಿಪಕ್ಷಗಳು ವ್ಯಕ್ತಪಡಿಸಿರುವ ಕಳವಳವನ್ನು ನಿವಾರಿಸುವಲ್ಲಿ ಅವರ ಸ್ಪಂದನ ನಿರಾಶಾದಾಯಕವಾಗಿದೆ.

ಭಾರತದ ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ನೆನಪುಗಳ ಅಪ್ರಕಟಿತ ಕೃತಿಯ ಆಯ್ದ ಭಾಗಗಳನ್ನು ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಅನುಮತಿ ನಿರಾಕರಿಸಿರುವ ಸ್ಪೀಕರ್ ಅವರ ನಿರ್ಧಾರ ವಿವಾದಕ್ಕೆ ಕಾರಣವಾಗಿದೆ. ರಾಷ್ಟ್ರೀಯ ಭದ್ರತೆಯ ವಿಷಯಕ್ಕೆ ಸಂಬಂಧಿಸಿದಂತೆ ಭಾರತದ ಸೇನೆಯ ಮಾಜಿ ಮುಖ್ಯಸ್ಥರು ಗಮನಿಸಿರುವ ಅಂಶಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸುವ ಹಕ್ಕು ರಾಹುಲ್ ಗಾಂಧಿ ಅವರಿಗಿದೆ. ಕಲಾಪಕ್ಕೆ ಸಂಬಂಧಿಸಿಲ್ಲದ ಪಠ್ಯಗಳನ್ನು ಸದನದಲ್ಲಿ ಓದುವುದನ್ನು ನಿಯಮಗಳು ನಿರ್ಬಂಧಿಸುತ್ತವಾದರೂ, ಪಠ್ಯದ ನೈಜತೆಯನ್ನು ಪ್ರಮಾಣೀಕರಿಸುವ ಮೂಲಕ ಸಂಸದರು ಸದನದಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶವಿದೆ. ಹಾಗಾಗಿ, ರಾಹುಲ್ ಅವರಿಗೆ ನರವಣೆ ಅವರ ಪುಸ್ತಕದಲ್ಲಿನ ವಿವರಗಳನ್ನು ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಸಭಾಧ್ಯಕ್ಷರು ಅನುಮತಿ ನೀಡಬೇಕಾಗಿತ್ತು.

ಸಂಸತ್ತಿನ ಅತ್ಯುತ್ತಮ ಪರಂಪರೆಯು, ಲೋಕಸಭೆ ವಿರೋಧ ಪಕ್ಷದ ನಾಯಕ ಮಾತನಾಡುವುದನ್ನು ನಿರ್ಬಂಧಿಸಲು ಒಪ್ಪುವುದಿಲ್ಲ. ರಾಷ್ಟ್ರಪತಿ ಅವರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಪ್ರಧಾನಿ ಅವರು ಮಾತನಾಡಬೇಕಾಗಿತ್ತು. ಆ ಸಂದರ್ಭದಲ್ಲಿ ಸದನಕ್ಕೆ ಗೈರುಹಾಜರಾಗುವಂತೆ ಬಿರ್ಲಾ ಅವರು ನರೇಂದ್ರ ಮೋದಿ ಅವರಿಗೆ ನೀಡಿದ ಸಲಹೆಯೂ ವಿವಾದಾಸ್ಪದವಾಗಿದೆ. ತಮ್ಮ ನಡವಳಿಕೆಗೆ ಸಮರ್ಥನೆಯಾಗಿ, ಮಹಿಳಾ ಸದಸ್ಯರಿಂದ ಪ್ರಧಾನಿ ಮೇಲೆ ದಾಳಿ ನಡೆಸುವುದು ಸೇರಿದಂತೆ ಅಹಿತಕಾರಿಯಾಗಿ ನಡೆದುಕೊಳ್ಳಲು ವಿರೋಧ ಪಕ್ಷಗಳು ಯೋಜಿಸಿರುವುದು ವಿಶ್ವಾಸಾರ್ಹ ಮೂಲಗಳಿಂದ ತಿಳಿದುಬಂತು ಎಂದು ಸ್ಪೀಕರ್ ಹೇಳಿದ್ದಾರೆ. ಒಂದುವೇಳೆ, ಪ್ರಧಾನಿ ಅವರ ಸುರಕ್ಷತೆಗೆ ಬೆದರಿಕೆ ಇದ್ದಲ್ಲಿ ಪಿತೂರಿ ಮಾಡಿದವರ ಮೇಲೆ ಕ್ರಮ ಕೈಗೊಳ್ಳುವುದು ಹಾಗೂ ಪ್ರಧಾನಿ ಅವರ ಸುರಕ್ಷತೆಯ ಹೊಣೆ ಹೊತ್ತವರನ್ನು ಎಚ್ಚರಿಸುವುದು ಸಭಾಧ್ಯಕ್ಷರ ಕರ್ತವ್ಯವಾಗಿತ್ತೇ ಹೊರತು, ಪ್ರಧಾನಿ ಅವರನ್ನು ಸದನದಿಂದ ದೂರವಿರಿಸುವುದು ಸಮರ್ಪಕವಾದ ಪ್ರತಿಕ್ರಿಯೆಯಲ್ಲ.

ಸಂಸತ್‌ನಲ್ಲಿನ ಚರ್ಚೆ, ಸಂವಾದಗಳ ಗುಣಮಟ್ಟ ಮತ್ತು ನಡವಳಿಕೆಯು ಇತ್ತೀಚಿನ ವರ್ಷಗಳಲ್ಲಿ ತೀವ್ರವಾಗಿ ಕುಸಿಯುತ್ತಿದೆ. ಈ ಕುಸಿತದ ಜವಾಬ್ದಾರಿಯನ್ನು ಸರ್ಕಾರದೊಂದಿಗೆ ವಿರೋಧ ಪಕ್ಷಗಳೂ ಹೊರಬೇಕಾಗಿದೆ. ಆದರೆ, ಸಭಾಧ್ಯಕ್ಷರು ತಮ್ಮ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ವಿಫಲರಾದಾಗ. ನಿಷ್ಪಕ್ಷಪಾತವಾಗಿ ಹಾಗೂ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಸೋತಾಗ, ಕಲಾಪ ಅರ್ಥಪೂರ್ಣವಾಗಿ ಸಾಗುವುದಕ್ಕೆ ಅಗತ್ಯವಾದ ಅತ್ಯುತ್ತಮ ಮಾನದಂಡಗಳು ಹಾಗೂ ಸಂಪ್ರದಾಯಗಳನ್ನು ನಿರ್ಲಜ್ಜೆಯಿಂದ ನಿರ್ಲಕ್ಷಿಸಿದಾಗ, ಈ ಕುಸಿತ ಮತ್ತಷ್ಟು ಆತಂಕ ಹುಟ್ಟಿಸುವಂತಹದ್ದಾಗುತ್ತದೆ. ಅವಿಶ್ವಾಸ ಗೊತ್ತುವಳಿ ಮಂಡನೆಯ ಸಂದರ್ಭವನ್ನು ಬಿರ್ಲಾ ಅವರು ಸ್ವತಃ ಆಹ್ವಾನಿಸಿಕೊಂಡಿದ್ದಾರೆ. ಬಜೆಟ್ ಅಧಿವೇಶನದ ಎರಡನೇ ಹಂತ ಮಾರ್ಚ್ 9ರಿಂದ ಪ್ರಾರಂಭವಾಗಲಿದ್ದು, ಸ್ಪೀಕರ್ ಕಾರ್ಯವಿಧಾನದ ಪರಾಮರ್ಶೆ ಹಾಗೂ ಸದನದ ಘನತೆಯನ್ನು ಸಂರಕ್ಷಿಸುವ ಕುರಿತಾದ ಅರ್ಥಪೂರ್ಣ ಚರ್ಚೆ ನಡೆಯಬೇಕಾಗಿದೆ.

# ಅನಾತ್ಮ ಸಿನೆಮಾ ಫಿಕ್ಷನ್‌ನಂತೆ ಓದಿಸಿಕೊಂಡು ಹೋಗುತ್ತದೆ

• ಉದಯವಾಹಿನಿ, ಬೆಂಗಳೂರು

ಇಲ್ಲಿನ ಬಸವನಗುಡಿ ಬಿ.ಪಿ.ವಾಡಿಯಾ ರಸ್ತೆಯಲ್ಲಿರುವ ದಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ವಾಡಿಯಾ ಹಾಲ್ ನಲ್ಲಿ ಇಂದು ಬೆಳಿಗ್ಗೆ 10-30ಕ್ಕೆ ಆಯೋಜಿಸಿದ್ದ 'ಅನಾತ್ಮ' ಕೃತಿಯ ಲೋಕಾರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಹಿತಿಗಳ ಸಂಗಮದಲ್ಲಿ ಅಧ್ಯಕ್ಷತೆ ವಹಿಸಿದ್ದಕ್ಕೆ ನನಗೆ ಸಂಕೋಚವೆನಿಸುತ್ತಿದೆ ಎಂದು ಮಾತು ಆರಂಭಿಸುತ್ತಲೇ ಡಿ.ವಿ.ಜಿ., ದ.ರಾ.ಬೇಂದ್ರೆ, ಅವರಂತಹ ಮೇರು ಕವಿ, ಸಾಹಿತಿಗಳು ಆರ್ಥಿಕವಾಗಿ ಸಬಲರದಲ್ಲದಿದ್ದರೂ ಅವರ ಕೃತಿಗಳು, ಬರವಣಿಗೆಗಳು ಸಮೃದ್ಧವಾಗಿದ್ದವು. ಕುವೆಂಪು ಮತ್ತು ಅವರ ಪುತ್ರ, ಡಾ.ಪೂರ್ಣಚಂದ್ರ ತೇಜಸ್ವಿ ಅವರು ಕಾಡು, ಪರಿಸರ, ಖಗ, ಪಕ್ಷಿಗಳ ಕುರಿತು ಅದ್ಭುತವಾದ ಕೃತಿಗಳನ್ನು ರಚಿಸಿದ್ದಾರೆ. ಆ ಸಾಲಿನಲ್ಲಿ ಗುರುಪಾದಸ್ವಾಮಿ ಅವರು ಚಿಕ್ಕಂದಿನಿಂದಲೂ ಒಳ್ಳೆಯ ಪರಿಸರದಲ್ಲಿ ಬೆಳೆದಿದ್ದಾರೆ.

ಅವರೇ ಹೇಳುವಂತೆ ಯಾರಿಗೆ ಬ್ರಾಹ್ಮಣರ ಸಹವಾಸ ಇರುತ್ತೋ ಅವರಿಗೆ ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಯಾಗುತ್ತದೆ. ಗುರುಪಾದಸ್ವಾಮಿ ಅವರು ಇರುವ ಪರಿಸರದಲ್ಲಿ ಬ್ರಾಹ್ಮಣರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವರು ಸಂಕೋಚ ಸ್ವಭಾವದ ವ್ಯಕ್ತಿಯಾಗಿದ್ದರೂ ಅವರಿಗೆ ಎಲ್ಲಾ ಬಗೆಯ ಆಳವಾದ ಜ್ಞಾನವಿದೆ. ಅವರು ಅದ್ಭುತವಾಗಿ ಹೇಳುವ ಕಥೆಗಳಿಗೆ ನನ್ನ ಮಕ್ಕಳೇ ಪ್ರಶಂಸೆ ವ್ಯಕ್ತಪಡಿಸುತ್ತಿದ್ದಾರೆ. ಅವರೊಬ್ಬ ಅನುಭವಿ ಕಥೆಗಾರರಾಗಿದ್ದು, 'ಅನಾತ್ಮ'ದಲ್ಲಿ ತಮ್ಮ ಕಲ್ಪನೆಯನ್ನು ತೆರೆದಿಟ್ಟಿದ್ದಾರೆ.

ಅನುಭವ ಮತ್ತು ಅನುಭಾವ ಇಲ್ಲದೇ ಯಾವುದೇ ಕಥೆ, ಕಾದಂಬರಿಗಳನ್ನು ಬರೆಯಲು ಸಾಧ್ಯವಿಲ್ಲ. 'ಅನಾತ್ಮ' ಅನೇಕ ದೃಷ್ಟಿಯಲ್ಲಿ ಓದುವಂತಹ ಕೃತಿಯಾಗಿದೆ. ವೈಜ್ಞಾನಿಕ, ಆಧ್ಯಾತ್ಮಿಕ, ಕೌಟುಂಬಿಕ ಮತ್ತು ಸಾಮಾಜಿಕ ಆಧಾರಿತವಾಗಿ ಈ ಕೃತಿ ಸೃಷ್ಟಿಯಾಗಿದೆ. ಝೀರೋ ಇದ್ದವರು ಕಾರಣಾಂತರಗಳಿಂದ ಹೀರೋ ಆಗಬಹುದು. ಕವಿ ಮತ್ತು ಸಾಹಿತಿಗಳಾಗಲು ಬಹಳ ಸಮಯಬೇಕು. ಗುರುಪಾದಸ್ವಾಮಿ ಅವರಿಂದ ಇನ್ನಷ್ಟು ಮೌಲ್ಯಯುತವಾದ ಕೃತಿಗಳು ಬರಲಿ ಎಂದು ಆಶಿಸಿದರು.

ಪ್ರಜಾವಾಣಿ ಅಭಿಮತದ ಸಂಪಾದಕರಾದ ರಘುನಾಥ ಚ.ಹ. ಅವರು ಪುಸ್ತಕದ ಕುರಿತು ಮಾತನಾಡಿ, 'ಅನಾತ್ಮ' ಕೃತಿ ಒಂದು ರೀತಿಯ ವೈದ್ಯಕೀಯ ಚಿಕಿತ್ಸೆ ನೀಡುವಂಥದ್ದು. ಬರಹಗಾರರು ಮತ್ತು ಕಲಾವಿದರು ತಮ್ಮಷ್ಟಕ್ಕೆ ತಾವು ಸೃಜನಶೀಲತೆಯನ್ನು ಸೃಷ್ಟಿಸುತ್ತಾರೆ. ಅವುಗಳನ್ನು ನಾವು ಗಮನಿಸಬೇಕು. ಗುರುಪಾದರು ಮುಖ್ಯವಾಗಿ ಕಥೆಗಾರರು.

ಜಲಸಂಪನ್ಮೂಲ ಇಲಾಖೆಯಲ್ಲಿ ಏಳೂವರೆ ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದ ಅವರು ವೈಜ್ಞಾನಿಕ ಕಥೆಗಳನ್ನು ಬರೆದಿದ್ದಾರೆ. ಆತ್ಮ, ಅನಾತ್ಮಗಳ ಕುರಿತು ನನ್ನಂಥವರಿಗೆ ಅನಾಕರ್ಷಣೆ ಇದ್ದರೂ 'ಅನಾತ್ಮ' ಕೃತಿ ನನ್ನಂಥವರನ್ನು ಆವರಿಸಿಕೊಂಡಿದೆ. ವಿರಳ ಬರಹಗಾರರು ಮಾತ್ರ ಇಂತಹ ಕೃತಿಗಳನ್ನು ರಚಿಸಬಲ್ಲರು. ಶಿವರಾಮ ಕಾರಂತರ 'ಅಳಿದ ಮೇಲೆ', ಭೈರಪ್ಪನವರ ಎಲ್ಲಾ ಕೃತಿಗಳಂತೆ 'ಅನಾತ್ಮ' ಮೌಲ್ಯ ಸಂಬಂಧಿತ ಕೃತಿಯಾಗಿದೆ. ಥ್ರಿಲ್ಲರ್, ಸಸ್ಪೆನ್ಸ್ ಮತ್ತು ನವರಸಭರಿತವಾದ ಎಲ್ಲಾ ವಿಶೇಷಣಗಳೂ ಈ ಕೃತಿಯಲ್ಲಿವೆ. ಪತ್ತೇದಾರಿ ಅಂಶವಿದ್ದು, ಇದು ಹುಡುಕಾಟದ ಕೊನೆ ಇರದ ಲೋಕವನ್ನು ಅನಾವರಣಗೊಳಿಸುತ್ತದೆ ಎಂದು ವಿಶ್ಲೇಷಿದರು.




ಬದುಕಿನ ಅರ್ಥ ಸಾಧ್ಯತೆ, ಅಷ್ಪಷ್ಟತೆಯಿಂದ ಸ್ಪಷ್ಟತೆಯತ್ತ ಸಾಗುವ ಹುಡುಕಾಟ ಈ ಕೃತಿಗೆ ಇದೆ. ಹೀಗಾಗಿ ಇದು ನಮಗೆ ಆಪ್ತವಾಗುತ್ತದೆ. ಕುವೆಂಪುರವರ ಅನಿಕೇತನ ಪ್ರಜ್ಞೆ ಸಂಕೇತಿಸುವ 'ಅನಾತ್ಮ' ಗತ ಮತ್ತು ವರ್ತಮಾನದ ಅಂಶಗಳನ್ನು ಕಟ್ಟಿ ಕೊಡುತ್ತದೆ. ಇದರಲ್ಲಿ ಋಣಾತ್ಮಕ ಪಾತ್ರಗಳಿದ್ದರೂ ಕಥೆಗೆ ಪೂರಕವಾಗಿ ಧನಾತ್ಮಕ ಅಂಶಗಳಿವೆ. ಬದುಕನ್ನು ಸಮಾಜದ ಮುಖ್ಯವಾಹಿನಿಗೆ ಎಳಸುವ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಜಿಜ್ಞಾಸೆ ಮೂಡಿಸುತ್ತದೆ. ಸೊಗಸಾದ ಭಾಷೆ, ಪರಂಪರೆಯಿಂದ ಬಂದ ಅನುಭವದ ಸೊಗಡು ಇದರಲ್ಲಿದೆ. ಈ ಕೃತಿ ಎಲ್ಲಾ ದೌರ್ಬಲ್ಯ ಮಿತಿಗಳನ್ನು ಮೀರಿ ತನ್ನದೇ ಆದ ಸಾಮರ್ಥ್ಯ ಹೊಂದಿದೆ. ಇಂತಹ ಕೃತಿಗಳ ಜೊತೆಗೆ ಗುರುಪಾದ ಅವರು ತಮ್ಮ ವೃತ್ತಿ ಸಂಬಂಧಿತ ಅನುಭವಗಳನ್ನು ಪುಸ್ತಕ ರೂಪದಲ್ಲಿ ದಾಖಲಿಸಲಿ ಎಂದು ಹೇಳಿದರು.

ನವಕರ್ನಾಟಕ ಪ್ರಕಾಶನ ಹೊಸತು ಸಂಪಾದಕರಾದ ಡಾ.ಸಿದ್ಧನಗೌಡ ಪಾಟೀಲ್ ಅವರು ಮಾತನಾಡಿ, ಇದು ನನಗೆ ಹೈ ವೋಲ್ಟೇಜ್ ಕಾರ್ಯಕ್ರಮ ಎಂದು ಭಾಸವಾಗುತ್ತಿದೆ. ವಿಧಾನಸೌಧ ಮತ್ತು ಹೈಕೋರ್ಟ್ ಪವರ್ ಒಟ್ಟೊಟ್ಟಿಗೆ ಜಮಾಯಿಸಿದಂತೆ ಕಾಣಿಸುತ್ತಿದೆ. ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಜೀವಪರವಾದ ಆಸಕ್ತಿಗಳಿರುವುದು ನನಗೆ ಸಂತೋಷ ಎನಿಸುತ್ತಿದೆ.


ಜಲಮಂಡಳಿಯಲ್ಲಿರುವವರು 'ಅನಾತ್ಮ'ದಂತಹ ಅಮೂಲ್ಯ ಕೃತಿ ರಚಿಸಿದ್ದು ಎಲ್ಲರೂ ಓದುವಂತಾಗಲಿ ಎಂದರು. ಇಂದು ಓದುವವರ ಸಂಖ್ಯೆ ಕ್ಷೀಣಿಸುತ್ತಿದೆ. ಇಂಗ್ಲೀಷ್ ವ್ಯಾಮೋಹದಿಂದಾಗಿ ಇಂತಹ ಕಾರ್ಯಕ್ರಮಗಳಿಗೆ ಯುವ ಜನತೆ ಆಕರ್ಷಿತರಾಗುತ್ತಿಲ್ಲ. ವೃದ್ಧರೇ ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇಂದು ಎಲ್ಲೆಡೆ ಜಾತೀಯತೆ, ಮೌಢ್ಯಗಳು ಬೆಳೆಯುತ್ತಿವೆ. ಜೀವನದ ಮೌಲ್ಯಗಳು ಬದಲಾಗುತ್ತಿವೆ. ಮನುಷ್ಯನ ನೈತಿಕತೆ ಬಿಂಬಿಸುವ ವಾತಾವರಣ ಕ್ಷೀಣಿಸುತ್ತಿದೆ. ನಮ್ಮ ತಲೆ ಭೂತದಲ್ಲಿದ್ದರೆ, ಕಾಲುಗಳು ವರ್ತಮಾನದಲ್ಲಿವೆ. ಮನುಷ್ಯನ ಮೌಲ್ಯಗಳು ಪಲ್ಲಟವಾಗುತ್ತಿದ್ದು, ಸಕಲವೂ ವ್ಯಾಪಾರೀಕರಣಗೊಳ್ಳುತ್ತಿರುವ ಈ ದಿನಗಳಲ್ಲಿ ಮನುಷ್ಯತ್ವದ ಹುಡುಕಾಟಕ್ಕೆ 'ಅನಾತ್ಮ' ತನ್ನನ್ನು ನಮ್ಮೊಂದಿಗೆ ತೆರೆದುಕೊಳ್ಳುತ್ತಿದೆ ಎಂದರು.

> ಜಲಸಂಪನ್ಮೂಲ ಇಲಾಖೆಯ ಸರ್ಕಾರದ ನಿವೃತ್ತ ಕಾರ್ಯದರ್ಶಿ ಗುರುಪಾದಸ್ವಾಮಿ ಬೇಲೂರು ಅವರು ಬರೆದಿರುವ 'ಅನಾತ್ಮ' ಕೃತಿ ಸಿನೇಮಾ ಫಿಕ್ಷನ್ ರೀತಿಯಲ್ಲಿದ್ದು ಓದುಗರನ್ನು ತನ್ಮಯವಾಗಿ ಓದಿಸಿಕೊಂಡು ಹೋಗುತ್ತದೆ. ನಾನು ಸಾಹಿತಿ ಅಲ್ಲ, ಅದರ ಅನುಭವವೂ ಇಲ್ಲ. ಆದರೂ 'ಅನಾತ್ಮ' ಕೃತಿಯನ್ನು ಎರಡು ಮೂರು ಗಂಟೆಗಳ ಕಾಲ ಊಟೋಪಚಾರದ ಪರಿವಿಲ್ಲದೇ ಓದಿದೆ
>
> -ಡಾ.ಹೆಚ್.ರವಿಕುಮಾರ್
> ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳ ಗೌರವ ವೈದ್ಯಕೀಯ ಸಲಹೆಗಾರ


ಕೃತಿಕಾರರು ಮತ್ತು ಜಲಸಂಪನ್ಮೂಲ ಇಲಾಖೆಯ ಸರ್ಕಾರದ ನಿವೃತ್ತ ಕಾರ್ಯದರ್ಶಿಗಳಾದ ಗುರುಪಾದಸ್ವಾಮಿ ಬಿ.ಜಿ., ಅವರು ಮಾತನಾಡಿ, 'ಅನಾತ್ಮ' ಕೃತಿಯನ್ನು ಅತ್ಯಂತ ತನ್ಮಯನಾಗಿ ಬರೆದಿದ್ದೇನೆ. ಕಥಾನಾಯಕನ ಪಾತ್ರದಲ್ಲಿ ಕಥೆಯನ್ನು ಸೃಷ್ಟಿ ಮಾಡಿದ್ದೇನೆ. ಪ್ರತ್ಯಕ್ಷ, ಉಪಮಾನ, ಶಾಬ್ದ ಮತ್ತು ಅನುಮಾನದ ಮೇಲೆ ನಮ್ಮ ಸಿದ್ಧಾಂತಗಳನ್ನು ರೂಪಿಸಿಕೊಳ್ಳುವಂತೆ ನಂಬಿಕೆಗಳ ಚೌಕಟ್ಟಿನೊಳಗೆ ವಿವೇಕ ಬರುವುದಿಲ್ಲ. ಸಮಾಜ ಬಿನ್ನಮತ ಸಹಿಸಿಕೊಳ್ಳುವುದಿಲ್ಲ. ಯಾವುದೇ ದೈವದ ಪ್ರಕಾಶ ಇದ್ದರೂ ನಮಗೆ ಸಿಗುವ ಮಾರ್ಗದರ್ಶನದಿಂದ ನಾವು ಬೆಳೆಯುತ್ತೇವೆ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅವರು 'ಅನಾತ್ಮ' ಕಾದಂಬರಿ ಲೋಕಾರ್ಪಣೆ ಮಾಡಿ ಮಾತನಾಡಿ ಸಂಗೀತ, ಸಾಹಿತ್ಯ, ಸಂಸ್ಕೃತಿ ಬೆಳೆದಲ್ಲಿ ನಮ್ಮ ಪರಂಪರೆ ಬೆಳೆಯುತ್ತದೆ. ಈ ಕಾದಂಬರಿ ಪ್ರತಿಯೊಬ್ಬ ಓದುಗನನ್ನು ಕುತೂಹಲದಿಂದ ಓದಿಸಿಕೊಂಡು ಹೋಗುವ ಅಪರೂಪದ ಕೃತಿಯಾಗಿದೆ. ಅಲೆಮಾರಿಯಾಗಿ ಹುಟ್ಟಿ ಬೆಳೆದ ಊರನ್ನು ತೊರೆದು, ದೇಶ ಸುತ್ತುವ ಕಥಾನಾಯಕ ರಾಘವ, ಮೊದಲು ತನ್ನಿಂದ ತಾನು ದೂರವಾಗಬೇಕೆಂದು ಬಯಸುತ್ತಾನೆ, ನಂತರ 'ನೆಮ್ಮದಿ'ಯನ್ನು ಹುಡುಕಿಕೊಂಡು ಅಲೆಯುತ್ತಾನೆ. ಕೊನೆಯಲ್ಲಿ ತನಗೆ 'ಆತ್ಮ ಸಾಕ್ಷಾತ್ಕಾರ' ವಾಗಬೇಕೆಂದು ಹಂಬಲಿಸುತ್ತಾನೆ. ಈ ಹುಡುಕಾಟದಲ್ಲಿ ಅವನಿಗೆ ಸಿಕ್ಕಿದ್ದು ಏನು ಎಂಬುದರ ಚಿತ್ರಣವೇ ಅನಾತ್ಮ ಕಾದಂಬರಿಯ ವಸ್ತು. ಭಾಷೆ, ಸಂಸ್ಕೃತಿ, ಪರಂಪರೆಯ ಸಂವೇದನಾಶೀಲತೆ ಸಾಯಬಾರದು. ಹೀಗಾಗಿ 'ಅನಾತ್ಮ' ಕೃತಿಯನ್ನು ಎಲ್ಲರೂ ಓದಬೇಕೆಂದರು. ಕನ್ನಾಡು ನಾರಾಯಣ ಮತ್ತು ತಂಡದವರು ಗಣ್ಯರನ್ನು ಇದೇವೇಳೆ ಸನ್ಮಾನಿಸಿದರು. ಡಿ.ವಿ.ಪಾಟೀಲ್ ಅವರು ಸ್ವಾಗತಿಸಿದರು. ಅರ್ಚನಾ ನಿರೂಪಿಸಿದರು. ಕುಮಾರ್ ಹಾಗೂ ವೈಷ್ಣವಿ ಪ್ರಾರ್ಥಿಸಿದರು.

# ಷಡ್ಯಂತ್ರ..!



ಷಡ್ಯಂತ್ರ ಎಂಬ ಪದವನ್ನು ನಾವು ಹಲವಾರು ಸಂಧರ್ಭದಲ್ಲಿ ಬಳಸಿರುತ್ತೇವೆ ಅಥವಾ ಕೇಳಿರುತ್ತೇವೆ ಆದರೇ ಈ ಷಡ್ಯಂತ್ರ ಪದದ ನಿಜವಾದ ಅರ್ಥ ವ್ಯಾಪ್ತಿ ಹಾಗೂ ಪದ ಬಳಕೆಯ ವೈಚಾರಿಕ ಹಿನ್ನೆಲೆಗಳ ಅರಿವು ಬಹಳ ಜನರಿಗೆ ಇರುವುದಿಲ್ಲ ಆದುದರಿಂದ ಷಡ್ಯಂತ್ರದ ಬಗ್ಗೆ ಲಭ್ಯವಿರುವ ಒಂದಿಷ್ಟು ಮಾಹಿತಿಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಪುರಾಣಗಳು ಹಾಗೂ ಇತಿಹಾಸದ ಪುಟಗಳಲ್ಲಿ ಹಲವು ರಾಜ ಮಹರಾಜರುಗಳು ಹಾಗೂ ಇಂದಿನ ರಾಜಕಾರಣಿಗಳು ಹಾಗೂ ಜನ ಸಾಮಾನ್ಯರೂ ಸಹಾ ತಮ್ಮ ವಿರೋಧಿ ಗಳನ್ನು ಮಣಿಸಲು ಅವರ ವಿರುದ್ದ ಷಡ್ಯಂತ್ರವನ್ನು ಪ್ರಯೋಗಿಸುತ್ತಾರೆ



ಆದರೇ ಈ ಷಡ್ಯಂತ್ರವು ನಿಜವಾಗಿಯೂ ವಿರೋಧಿಯ ಮೇಲೆ ಪ್ರಯೋಗವಾದಲ್ಲಿ ಅವನು ಅದರಿಂದ ಪಾರಾಗುವುದು ಕಷ್ಟಸಾಧ್ಯ ಏಕೆಂದರೇ ಈ ಷಡ್ಯಂತ್ರ ವೆಂಬುದು ಬಹಳ ಪರಿಣಾಮಕಾರಿಯಾದ ಒಂದು ಅಸ್ತ್ರ ಅಥವಾ ಪ್ರಯೋಗವಾಗಿದೆ

ಹೆಸರೇ ಸೂಚಿಸುವಂತೆ ಷಡ್ಯಂತ್ರವೆಂದರೇ ಆರು ರೀತಿಯಲ್ಲಿ ಅಥವಾ ಆರು ದಿಕ್ಕುಗಳಲ್ಲಿ ಶತೃವನ್ನು ಬಂದಿಸುವ ನಿಷ್ಕ್ರಿಯಗೊಳಿಸುವ ಅಥವಾ ಸೋಲಿಸುವ ಒಂದು ಪ್ರಯೋಗವಾಗಿದೆ. ಇವುಗಳಲ್ಲಿ ಯಾವುದಾದರೂ ಎರಡು ಮೂರು ದಿಕ್ಕುಗಳ ಅಥವಾ ರೀತಿಯ ಪ್ರಭಾವವು ಎದುರಾಳಿಯ ಮೇಲೆ ಬಿದ್ದರೂ ಸಹಾ ಅವನ ವಿನಾಶ ಅಥವಾ ಸೋಲು ನಿಶ್ಚಿತ

**ಪೌರಾಣಿಕ ಹಿನ್ನೆಲೆ**

ಅರವತ್ತನಾಲ್ಕು ಕೋಟಿ ಯೋಗಿನಿ ದೇವತೆಗಳ ಒಡತಿ ಲಲಿತೆಯ ಮೇಲೆ ರಾಕ್ಷಸನೊಬ್ಬ ಮೊಲಬಾರಿಗೆ ಷಡ್ಯಂತ್ರವನ್ನು ಬಳಸಿ ಲಲಿತೆಯ ಯೋಗಿನಿಯರನ್ನು ನಿಷ್ಕ್ರಿಯಗೊಳಿಸಿದ್ದ ಹಾಗೂ ಇದನ್ನರಿತ ಲಲಿತೆಯು ವಿಘ್ನೇಶ್ವರನ ಸಹಕಾರದಿಂದ ರಾಕ್ಷಸ ಹೂಡಿದ್ದ ಷಡ್ಯಂತ್ರದಿಂದ ಪಾರಾಗಿ ರಾಕ್ಷಸನನ್ನು ಸಂಹಾರ ಮಾಡಿದ ರೋಚಕ ಕಥೆಯೊಂದು ಲಲಿತ ಪುರಾಣದಲ್ಲಿ ಹೇಳಲ್ಪಟ್ಟಿದೆ

**ಷಡ್ಯಂತ್ರ ಪ್ರಯೋಗದ ಭೀಕರ ಪರಿಣಾಮ**

ಮೊದಲೇ ಹೇಳಿದಂತೆ ಈ ಯಂತ್ರವು ಅಥವಾ ತಂತ್ರಜ್ಞಾನವು ಎದುರಾಳಿಯನ್ನು ಆರು ರೀತಿಯಲ್ಲಿ ಭಾದಿಸುತ್ತದೆ ಅವು ಯಾವುವೆಂದರೇ

1 **ಮರಣ:** ಎದುರಾಳಿಯ ಮರಣವೇ ಸಂಭವಿಸಬಹುದು ಎದುರಾಳಿಯೇ ಮರಣ ಹೊಂದಿದಾಗ ಗೆಲುವು ಷಡ್ಯಂತ್ರ ಪ್ರಯೋಗಿಸಿದವನಿಗೇ ಲಭಿಸುವುದು

2 **ಮೋಹನ:** ಎದುರಾಳಿಯು ಹಲವು ರೀತಿಯಲ್ಲಿ ಮಾನಸಿಕ ತೊಳಲಾಟಗಳಿಗೆ ಸಿಕ್ಕಿ ತನ್ನ ಹೋರಾಟವನ್ನು ಕೈ ಬಿಡುವುವಂತೆ ಮಾಡುವುದು

3 **ಉಚ್ಚಾಟನ :** ಎದುರಾಳಿಯು ತನ್ನ ಸ್ತಾನದಿಂದ ಅನಿವಾರ್ಯ ಕಾರಣಗಳಿಂದ ಗಡಿಪಾರಾಗಬಹುದು ಅಥವಾ ಜಾಗ ಕಾಲಿ ಮಾಡವಂತೆ ಮಾಡುವುದು

4 **ವಿದ್ವೇಷಣ :** ಎದುರಾಳಿಯ ಸಂಬಂದಗಳಲ್ಲಿ ಒಡಕು ಮೂಡುವಂತೆ ಮಾಡುವುದು ಎದುರಾಳಿಯ ಸಾಮರ್ಥ್ಯವನ್ನು ಹೆಚ್ಚಿಸುವಂತಹ ಬಂದು ಬಳಗ ಸ್ನೇಹಿತರು ಸೈನಿಕರು ಸಹಪಾಟಿಗಳು ಕುಟುಂಬದ ಸದಸ್ಯರೊಂದಿಗೆ ಮನಃಸ್ತಾಪ ಮೂಡುವಂತೆ ಮಾಡಿ ಎದುರಾಳಿಯನ್ನು ಒಂಟಿಯಾಗಿಸುವುದು

5 **ಆಕರ್ಷಣ :** ಎದುರಾಳಿ ತನ್ನ ಹೋರಾಟವನ್ನು ಬಿಟ್ಟು ಬೇರೊಂದು ವಿಷಯದ ಕಡೆಗೆ ಮನಸು ಬದಲಿಸುವಂತೆ ಅಥವಾ ಬೇರೊಂದು ವಿಷಯದ ಮೋಹಕ್ಕೆ ಸಿಕ್ಕಿಸುವುದು ಇಲ್ಲಿ ಮಾದಕ ವಸ್ತು ಹೆಣ್ಣು ಮುಂತಾದವುಗಳ ಕಡೆ ಎದುರಾಳಿಯ ಮನಸ್ಸು ತಿರುಗಿಸುವುದು

6 **ಸ್ಥಂಭನ :** ಎದುರಾಳಿಯ ಸಂಪನ್ಮೂಲಗಳನ್ನು ನಿಲ್ಲಿಸುವುದು ಹೋರಾಟಕ್ಕೆ ಅಗತ್ಯವಿರುವ ಸಂಪತ್ತು ಹಣ ಶಸ್ತ್ರಾಸ್ತ್ರಗಳು ಮುಂತಾದವುಗಳು ದೊರೆಯದಂತೆ ಮಾಡುವುದು


ಇಷ್ಟು ರೀತಿಯಲ್ಲಿ ಎದುರಾಳಿಯ ಶಕ್ತಿಯನ್ನು ಕುಗ್ಗಿಸುವ ಅಸ್ತ್ರವೇ ಈ ಷಡ್ಯಂತ್ರ

ಜನಸಾಮಾನ್ಯರು ಈ ಪದವನ್ನು ಒಂದು ಸಾದಾರಣ ಕುತಂತ್ರವೆಂದಷ್ಟೇ ಭಾವಿಸಿದ್ದಾರೆ ಆದರೇ ಷಡ್ಯಂತ್ರದ ನಿಜ ಅರ್ಥವು ಬಹಳ ವಿಶಾಲವಾಗಿದೆ ನಿಮ್ಮ ಮೇಲೆ ಯಾರಾದರೂ ಷಡ್ಯಂತ್ರ ಪ್ರಯೋಗಿಸಿದ್ದಾರೆಯೇ ಅದರಲ್ಲಿ ಯಾವ ರೀತಿಯ ಪರಿಣಾಮವನ್ನು ಎದುರಿಸುತ್ತಿದ್ದೀರಿ ಇದನ್ನು ತಕ್ಷಣವೇ ಗುರುತಿಸಿಕೊಂಡು ಪಾರಾಗದಿದ್ದಲ್ಲಿ ಷಡ್ಯಂತ್ರದ ಆರೂ ದಿಕ್ಕುಗಳು ಕ್ರಿಯಾಶೀಲವಾಗುವ ಸಾಧ್ಯತೆಗಳಿರುತ್ತವೆ.




☛ ವಿಶ್ವಾಸ್.ಡಿ.ಗೌಡ

# ದಿನಕ್ಕೊಂದು ಮುಕ್ತಕ: 93



ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ



*ಪುಸ್ತಕದ ಸಾರವನು ಅರಿಯುತ್ತ ನಡೆಯುತಿರೆ*
*ಮಸ್ತಕದ ಒಳಗಿರುವ ವಿಷಯವನ್ನು*
*ಹಸ್ತದಲಿ ಬರೆಯುತ್ತ ಸಾಗುತಿರೆ ಜೀವನದಿ*
*ಗಸ್ತನೆನು ಹೊಡೆಯದಿರು ಲಕ್ಷ್ಮಿ ದೇವಿ...*

**ಭಾವಾರ್ಥ:** ನಾವು ಓದುವಂತಹ ಪುಸ್ತಕದಲ್ಲಿ ಬಹಳಷ್ಟು ವಿಚಾರಗಳನ್ನು ತಿಳಿಯುತ್ತೇವೆ. ತಿಳಿದ ನಂತರ ಅದನ್ನು ಅರಿತು ನಡೆಯುತ್ತೇವೆ. ನಾವು ಓದಿದ ವಿಚಾರಗಳೆಲ್ಲ ಮಸ್ತಕದಲ್ಲಿ ವಿಷಯವು ಸಂಗ್ರಹವಾಗುತ್ತದೆ.ಆ ವಿಷಯಗಳನ್ನು ಕೆಲವೊಮ್ಮೆ ಭಾವನಾತ್ಮಕವಾಗಿ ವಸ್ತುಗಳನ್ನು ಬಳಸಿಕೊಂಡು ಬರವಣಿಗೆಯ ರೂಪದಲ್ಲಿ ನಮೂದಿಸುತ್ತಾ ಜೀವನದಲ್ಲಿ ಸಾಗುತ್ತೇವೆ. ಅದನ್ನು ಬಿಟ್ಟು ಗಸ್ತನೆನು ಒಡೆಯುವುದಿಲ್ಲ. ನಮ್ಮ ಜೀವನದಲ್ಲಿ ಬದುಕಿನ ಸಾರದ ಜೊತೆಗೆ ವಿಷಯದ ಸಂಗ್ರಹವನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ.ಅಂತಹದನ್ನು ನಾವು ಪುಸ್ತಕಗಳ ಮುಖಾಂತರ ತಿಳಿದುಕೊಂಡಾಗ ಪ್ರತಿಯೊಬ್ಬರೂ ಜ್ಞಾನಿಗಳಾಗುತ್ತಾರೆ. ತಮ್ಮದೇ ಆದಂತಹ ಅರಿವನ್ನು ಮಸ್ತಕದಲ್ಲಿ ತುಂಬಿಕೊಂಡು ಮುಂದಿನ ವಿಚಾರಗಳಲ್ಲಿ ಪಕ್ವತೆಯನ್ನು ವಿಷಯಗಳಲ್ಲಿ ಹೊಂದುತ್ತಾರೆ. ಪುಸ್ತಕಗಳು ಮನುಷ್ಯರಂತೆ ಸುಳ್ಳು ಹೇಳುವುದಿಲ್ಲ. ಅದು ಮಾನವನಲ್ಲಿ ಜ್ಞಾನವನ್ನು ಹೆಚ್ಚಿಸುತ್ತದೆ.



# ರಾಮಾಯಣ

ವರ್ಷಾಕಾಲ ವರ್ಣನೆ

• ಹಿಂದಿನ ಸಂಚಿಕೆಯಿಂದ

## 120 ನೆಯ ಅಧ್ಯಾಯ

ಮಿಂಚೆಂಬ ಪತಾಕೆಗಳಿಂದ ಅಲಂಕರಿಸಲ್ಪಟ್ಟದ್ದಾಗಿ ಗರ್ಜನೆಯೆಂಬ ಗಂಭೀರಧ್ವನಿಯುಳ್ಳ ಮೇಘಗಳು ಯುದ್ಧ ಸಂನದ್ಧವಾಗಿ ನಿಂತಿರುವ ಆನೆಗಳಂತೆ ಕಾಣುತ್ತಿವೆ. ಪರ್ವತದ ವನಾಂತರಗಳಲ್ಲಿ ಸಂಚರಿಸುವ ಕಾಡಾನೆಗಳು ಗುಡುಗಿನ ಧ್ವನಿಯನ್ನು ಕೇಳಿ ಶತ್ರುಗಜದ ಧ್ವನಿಯೆಂಬ ಸಂಶಯದಿಂದ ಯುದ್ಧಕ್ಕಾಗಿ ಹಿಂದಿರುಗಿ ಬರುತ್ತಿವೆ. ಮೃಗಪಕ್ಷಿಗಳಿಗೆ ಆಶ್ರಯವಾದ ವನಗಳು ತಮ್ಮಲ್ಲಿರುವ ದುಂಬಿಗಳ ಝಂಕಾರಗಳಿಂದ ಗಾನಮಾಡುವಂತೆಯೂ ಪುಷ್ಪಿತವಾದ ಕಡಬ ಸಜ್ಜರಸ ಅಶ್ವತ್ಥ ಮತ್ತಿಗಳಲ್ಲಿ ಕುಳಿತಿರುವ ನವಿಲುಗಳಿಂದ ನರ್ತನಮಾಡುವಂತೆಯೂ ತೋರುತ್ತಿವೆ! ಎಲೆಗಳ ಮೇಲೆ ಬೀಳುವ ಮಳೆಹನಿಗಳನ್ನು ಪಕ್ಷಿಗಳು ಅಮೃತವೆಂದೆಣಿಸುತ್ತಿವೆಯೊ ಏಂಬಂತೆ ತೃಷೆಯಿಂದ ಕಂಗೆಟ್ಟು ಬಂದು ಅತ್ಯಂತ ಸಂತೋಷದಿಂದ ಪಾನಮಾಡುತ್ತಿವ. ತಂತಿಯ ಮಧುರಸ್ವರದಿಂದಲೂ ತಾಳಮದ್ದಳೆಗಳ ಧ್ವನಿಯಿಂದಲೂ ಕೂಡಿದ ಸಂಗೀತವೋ ಎಂಬಂತೆ ದುಂಬಿಗಳ ಗೀಂಕಾರವು ಕಪಿಗಳ ಕಂಠಸ್ವರದಿಂದಲೂ ಗುಡುಗಿನ ಧನಿಯಿಂದಲೂ ಕೂಡಿ ಒಪ್ಪುತ್ತಿವೆ.

ತಮ್ಮ ಸ್ಥಾನಗಳಲ್ಲಿ ಮಲಗಿರುವ ಕಪಿಗಳು ಗುಡುಗಿನ ಧ್ವನಿಯಿಂದೆದ್ದು ನಿದ್ರೆಯನ್ನು ಬಿಟ್ಟು ಮಳೆಯಲ್ಲಿ ನೆನೆದು ಕೂಗಿಕೊಳ್ಳುತ್ತಿವೆ. ಆನೆಗಳು ಮದದಿಂದ ಧ್ವನಿಗೈಯುತ್ತಿರಲು ನವಿಲುಗಳು ವೃಕ್ಷಗಳಲ್ಲಿ ಮನೋಹರವಾಗಿ ಸಂಚರಿಸುತ್ತಿವೆ. ಕೆರೆಗಳೂ ನದಿಗಳೂ ಕೊಳಗಳೂ ಭಾವಿಗಳೂ ತುಂಬಿ ಉದಕಪ್ರವಾಹಗಳಿಂದ ಭೂಮಂಡಲವೆಲ್ಲವೂ ಪರಿಪೂರ್ಣವಾಗಿದೆ. ಮಳೆಯ ಆರ್ಭಟದೊಡನೆ ಗಾಳಿಯು ಕೋಲಾಹಲವಾಗಿ ಬೀಸುತ್ತಿದೆ. ಎಲ್ಲಿ ನೋಡಿದರೂ ನದಿಗಳು ಉಕ್ಕುತ್ತ ಅಡ್ಡತಿಡ್ಡಾದ ಮಾರ್ಗದಲ್ಲಿ ಹರಿಯುತ್ತಿವೆ. ಅರಸರು ಮನಂಷ್ಯರಿಂದ ತರಲ್ಪಡುವ ಉದಕಕುಂಭಗಳಿಂದ ಅಭಿಷೇಕಮಾಡಿಸಿಕೊಳ್ಳುವಂತೆ, ಪರ್ವತಗಳು ದೇವತೆಗಳಿಂದ ಮೇಘಗಳೆಂಬ ಉದಕಕುಂಭಗಳಿಂದ ಅಭಿಷೇಕಮಾಡಲ್ಪಡುತ್ತಿವೆಯೊ ಎಂಬಂತೆ ಒಪ್ಪುತ್ತಿವೆ.

ಮೇಘಮಂಡಲದಿಂದ ಆಚ್ಛಾದಿತನಾಗಿ ಅಂತರಿಕ್ಷದಲ್ಲಿ ಸೂರ್ಯನು ಕಾಣಿಸನು. ಪರ್ವತದ ತಪ್ಪಲುಗಳ ಕೋಡುಗಲ್ಲುಗ್ಗಳ ಕಲ್ಲರೆಗಳ ಮೇಲೆ ಬೀಳುವ ವಜ್ಜರೋದಕಗಳು ಆ ಪರ್ವತಕ್ಕೆ ಅಲಂಕರಿಸಲ್ಪಟ್ಟ ಮುತ್ತಿನ ಸರಗಳಂತೆ ಒಪ್ಪುತ್ತಿವೆ. ಈಗ ಸೂರ್ಯಾಸ್ತಮಯ ಸಮಯವನ್ನು ತಮ್ಮ ಗೂಡುಗಳನ್ನು ಸೇರುತ್ತಿರುವ ಪಕ್ಷಿಗಳಿಂದಲೂ ಕಮಲಗಳಿಂದಲೂ ವಿಕಸಿತವಾಗುವ ಇರುವಂತಿಗೆಗಳಿಂದಲೂ ತಿಳಿಯಬಹುದಾಗಿದೆ. ಲಕ್ಷ್ಮಣ, ಈ ಭಾದ್ರಪದವು ಸಾಮಶಾಖಾಧ್ಯಾಯಿಗಳಾದ ಬ್ರಾಹ್ಮಣರಿಗೆ ಸಾಮಗಾನಮಾಡುವುದಕ್ಕೆ ಸಮಯವಾಗಿದೆ. ಈಗ ಭರತನು ಸಮಸ್ತ ಸಾಮಗ್ರಿಗಳನ್ನು ಸಂಪಾದಿಸಿಕೊಂಡು ಸ್ವಸ್ಥಚಿತ್ತನಾಗಿರುವನು. ಎಲೈ ಲಕ್ಷ್ಮಣ, ಈ ಸಮಯದಲ್ಲಿ ಸರಯೂನದಿಯು ಪ್ರವಾಹ ಉಬ್ಬಿ ಮೊರೆಯುತ್ತಿದ್ದರೆ ಅಯೋಧ್ಯಾಪಟ್ಟಣವು ನನ್ನ ಬರವನ್ನು ನೋಡುತ್ತ ಕೂಗುತ್ತಿದೆಯೋ ಎಂಬಂತೆ ಒಪ್ಪುತ್ತಿರಬಹುದೂ. ಈ ಸಮಯದಲ್ಲಿ ಶತ್ರುವನ್ನು ಜಯಿಸಿ ರಾಜ್ಯಾಧಿಪತ್ಯವನ್ನು ವಹಿಸಿಕೊಂಡು ತನ್ನ ಸ್ತ್ರೀಸಮೇತನಾಗಿರುವ ಸುಗ್ರೀವನು ಹರ್ಷದಿಂದ ಸುಖಿಸಿಕೊಂಡಿರುವನು.

ಮುಂದುವರಿಯುವುದು...

# ಕಂದು ಬಣ್ಣದ ತೇಪೆಗಳ ಸಮಸ್ಯೆಗೆ ಆಯುರ್ವೇದ ಪರಿಹಾರ





ಅಲೋವೆರಾ ತ್ರಿಫಲ ಲೋಳೆಯ ಪುಡಿ

ಹಾರ್ಮೋನುಗಳ ಬದಲಾವಣೆ, ರಕ್ತದ ಅಶುದ್ಧತೆ,ಅತಿಯಾದ ಸೂರ್ಯನ ಶಾಖ ಮೈಒಡ್ಡುವುದರಿಂದ, ಈ ಸಮಸ್ಯೆ ಬೇಗನೇ ಕಾಣಿಸಿಕೊಳ್ಳುತ್ತದೆ ಎನ್ನುತ್ತಾರೆ ಆಯುರ್ವೇದ ವೈದ್ಯರು.

ಮೊಡವೆ, ಎಸ್ಜಿಮಾ, ಲೂಪಸ್ ಅಥವಾ ಚರ್ಮಕ್ಕೆ ಗಾಯದಂತಹ ಉರಿಯೂತದ ಪರಿಸ್ಥಿತಿಗಳು ಕಪ್ಪಾಗಲು ಕಾರಣವಾಗಬಹುದು. ಇದನ್ನು ಉರಿಯೂತದ ನಂತರದ ಹೈಪರ್ಪಿಗ್ಮೆಂಟೇಶನ್ ಎಂದು ಕರೆಯ ಲಾಗುತ್ತದೆ. ಕಪ್ಪು ಚರ್ಮ ಹೊಂದಿರುವ ಜನರಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಂಡು ಬರುತ್ತದೆ.

**ಮೆಲಸ್ಮಾ:** ಇದು ಹಾರ್ಮೋನುಗಳ ಬದಲಾವಣೆಗಳಿಂದ ಉಂಟಾಗುತ್ತದೆ ಮತ್ತು ಗರ್ಭಾವಸ್ಥೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದು ಮುಖ ಅಥವಾ ಹೊಟ್ಟೆಯ ಭಾಗಗಳಲ್ಲಿ ದೊಡ್ಡ, ಕಪ್ಪು ಕಲೆಗಳನ್ನು ಉಂಟುಮಾಡುತ್ತದೆ. ಇದು ಮಹಿಳೆ ಯರಲ್ಲಿ ಹೆಚ್ಚಾಗಿ ಕಂಡುಬರುತ್ತದೆ

**ಹಾಗಾದ್ರೆ ಈ ಸಮಸ್ಯೆಗೆ ಪರಿಹಾರಗಳೇನು**

**ಅಲೋವೆರಾ ಮತ್ತು ಜೇನುತುಪ್ಪ:** ಪಿಗ್ಮೆಂಟೇಶನ್ ಸಮಸ್ಯೆಯನ್ನು ನಿವಾರಣೆ ಮಾಡಲು ಅಲೋವೆರಾ ಜೆಲ್ ಮತ್ತು ಜೇನುತುಪ್ಪವನ್ನು ಬಳಸಬಹುದು. ಒಂದು ಚಮಚ ಅಲೋವೆರಾ ಜೆಲ್ ತೆಗೆದುಕೊಂಡು ಒಂದು ಚಮಚ ಜೇನುತುಪ್ಪವನ್ನು ಸೇರಿಸಿ.ಮಿಶ್ರಣವನ್ನು ಚೆನ್ನಾಗಿ ಮಿಶ್ರಣ ಮಾಡಿ ನಿಮ್ಮ ಮುಖಕ್ಕೆ ಹಚ್ಚಿ. 15-20 ನಿಮಿಷಗಳ ನಂತರ ನಿಮ್ಮ ಮುಖವನ್ನು ನೀರಿನಿಂದ ತೊಳೆಯಿರಿ. ನೀವು ಇದನ್ನು ವಾರಕ್ಕೆ 2-3 ಬಾರಿ ಬಳಸಬಹುದು. ಇದು ಚರ್ಮದ ಮೇಲಿನ ಕಲೆಗಳನ್ನು ನಿಧಾನಕ್ಕೆ ಕಡಿಮೆ ಮಾಡುವುದರ ಜೊತೆಗೆ ತ್ವಚೆಯ ಕಾಂತಿಯನ್ನು ಹೆಚ್ಚಿಸಲು ನೆರವಿಗೆ ಬರುತ್ತದೆ

**ಅಲೋವೆರಾ ಮತ್ತು ನಿಂಬೆ**

ಅಲೋವೆರಾ ಜೆಲ್ ಮತ್ತು ಜೇನುತುಪ್ಪದ ಮಿಶ್ರಣವು ಪಿಗ್ಮೆಂಟೇಶನ್ ಸಮಸ್ಯೆ ಯನ್ನು ನಿವಾರಣೆ ಮಾಡುವಲ್ಲಿ ಬಹಳ ಪ್ರಯೋಜನಕಾರಿಯಾಗಿದೆ. ನಿಂಬೆ ಚರ್ಮದ ಟೋನ್ ಅನ್ನು ಸುಧಾರಿಸಲು ಸಹಾಯ ಮಾಡುವ ಜೀವಸತ್ವಗಳನ್ನು ಹೊಂದಿರುತ್ತದೆ. ಇದನ್ನು ಮುಖಕ್ಕೆ ಹಚ್ಚುವುದರಿಂದ ಮೊಡವೆಗಳನ್ನು ತೊಡೆದುಹಾಕಲು ಸಹಾಯ ಮಾಡುತ್ತದೆ.ಇದಕ್ಕಾಗಿ,ಒಂದು ಚಮಚ ಅಲೋವೆರಾ ಜೆಲ್ ತೆಗೆದು ಕೊಳ್ಳಿ. ಅದಕ್ಕೆ ಒಂದು ಚಮಚ ನಿಂಬೆ ರಸ ಮತ್ತು ರೋಸ್ ವಾಟರ್ ಸೇರಿಸಿ. ಈ ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ಮಿಶ್ರಣ ಮಾಡಿ. ಈ ಪೇಸ್ಟ್ ಅನ್ನು ನಿಮ್ಮ ಮುಖಕ್ಕೆ ಹಚ್ಚಿ ಒಣಗಲು ಬಿಡಿ. ಸುಮಾರು 15 ನಿಮಿಷಗಳ ನಂತರ ನಿಮ್ಮ ಮುಖವನ್ನು ನೀರಿನಿಂದ ತೊಳೆಯಿರಿ.

ಅಲೋವೆರಾದ ಮೇಲಿನ ಸಿಪ್ಪೆಯನ್ನು ತೆಗೆದು, ಇದರ ಲೋಳೆಯ ಮೇಲೆ ತ್ರಿಫಲದ ಪುಡಿಯನ್ನು ಚುಮುಕಿಸಿ, ಆಬಳಿಕ ಇದನ್ನು ಒಂದು ಚಮದಷ್ಟು ಬೆಳಗ್ಗೆ ಹಾಗೂ ಸಂಜೆಯ ಸಮಯದಲ್ಲಿ ಸೇವಿಸುತ್ತಾ ಬರಬೇಕು, ಇದರಿಂದ ಆಂತರಿಕವಾಗಿ ರಕ್ತಪರಿಶುದ್ಧಯಾಗುತ್ತದೆ ಹಾಗೂ ಚರ್ಮದ ಕಾಂತಿಯೂ ಹೆಚ್ಚಾಗುತ್ತದೆ.

ಇನ್ನು ಈಗಾಗಲೇ ತೆಗೆದಿಟ್ಟರುವ ಲೋಳೆಯ ಸಿಪ್ಪೆಯನ್ನು ಮೂಖದ ಮೇಲೆ ಬಂಗು ಅಥವಾ ಪಿಗ್ಮೆಂಟೇಶನ್ ಸಮಸ್ಯೆ ಇರುವ ಕಡೆಗಳಲ್ಲಿ ಉಜ್ಜುತ್ತಾ ಬನ್ನಿ. ಹೀಗೆ ಪ್ರತಿದಿನ ಮಾಡುವುದರಿಂದ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು ಎನ್ನುತ್ತಾರೆ ವೈದ್ಯರು

**ಕೊನೆಯದಾಗಿ ವೈದ್ಯರು ಮಾತು**

ಚರ್ಮದ ಆರೋಗ್ಯ ಚೆನ್ನಾಗಿರಬೇಕು ಎಂದರೆ ಬಾಹ್ಯ ಆರೈಕೆಯ ಜೊತೆಗೆ ಆಂತರಿಕ ಆರೋಗ್ಯದ ಕಡೆಗೂ ಕೂಡ ಹೆಚ್ಚಿನ ಒತ್ತು ನೀಡಬೇಕು.

ಈ ನಿಟ್ಟಿನಲ್ಲಿ ನೋಡುವುದಾದರೆ ಕೆಲವೊಮ್ಮೆ ದೇಹದಲ್ಲಿ ವಿಟಮಿನ್ ಬಿ12, ಜಿಂಕ್, ವಿಟಮಿನ್ ಸಿ, ವಿಟಮಿನ್ ಇ ಕೊರತೆಯಿಂದ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ.

ಹೀಗಾಗಿ ಆದಷ್ಟು ಶುದ್ಧ ಮಜ್ಜಿಗೆ ಬೆಳಗ್ಗೆ ಹಾಗೂ ಮಧ್ಯಾಹ್ನ ಕುಡಿಯುವ ಅಭ್ಯಾಸ ಮಾಡಿ, ಇದರಲ್ಲಿ ಕಂಡುಬರುವ ವಿಟಮಿನ್ ಬಿ12 ಹೆಚ್ಚಾಗಿ ಕಂಡುಬರುತ್ತದೆ. ಇನ್ನು ರಕ್ತಹೀನತೆ ಸಮಸ್ಯೆಯಿಂದ ಕೂಡ ಬಂಗಿನ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆಗಳು ಇರುವುದರಿಂದ ಆದಷ್ಟು ಒಣದ್ರಾಕ್ಷಿ, ಪಾಲಕ್ ಸೊಪ್ಪು, ದಾಳಿಂಬೆ ಹಣ್ಣು, ಸೇವನೆ ಮಾಡುವ ಅಭ್ಯಾಸ ಮಾಡಿ, ಬೆಟ್ಟದನೆಲ್ಲಿಕಾಯಿ, ಕಿವಿಹಣ್ಣು, ನಿಂಬೆಹಣ್ಣು ಇವುಗಳಲ್ಲಿ ವಿಟಮಿನ್ ಸಿ ಹೆಚ್ಚಾಗಿ ಕಂಡುಬರುವುದರಿಂದ, ಚರ್ಮದ ಆರೋಗ್ಯವೃದ್ಧಿಸುವಲ್ಲಿ ನೆರವಿಗೆ ಬರುತ್ತದೆ.

